ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 44 | ನವೆಂಬರ್ 2, 1980 | ಬೆಲೆ : 50 ಪೈಸೆ

ದೆಹಲಿಯ ಮೇಳ

ನವದೆಹಲಿಯಲ್ಲಿ ಕಳೆದ ತಿಂಗಳ ಕೊನೆಯ ವಾರದಲ್ಲಿ ನ್ಯಾಯವಾದಿಗಳ ಒಂದು ರಾಷ್ಟ್ರಮಟ್ಟದ ಸಮಾವೇಶ ನಡೆದಿದೆ. ಸಮಾವೇಶವು ನಡೆಯುವುದಕ್ಕೆ ಮೊದಲೇ ಇದನ್ನು ಯಾರಿಂದ ಮತ್ತು ಏತಕ್ಕಾಗಿ ನಡೆಸಲ್ಪಡುತ್ತಲಿದೆ ಎಂಬುದು ಸ್ಪಷ್ಟವಾಗಿತ್ತು. ದೇಶವನ್ನು ಆಳುವ ಪಕ್ಷವು ಹಣದ ಮತ್ತು ಅಧಿಕಾರದ ದುರುಪಯೋಗವನ್ನು ಉಪಯೋಗಿಸಿಕೊಂಡು, ಇಂದಿರಾಗಾಂಧಿಯವರ "ಸರ್ವಾಧಿಕಾರಿ ಮತ್ತು ಮನೆತನದ ಆಡಳಿತ"ದ ಕಾರ್ಯಕ್ರಮಗಳಿಗೆ ಸಾರ್ವತ್ರಿಕ ಬೆಂಬಲವನ್ನು ಪಡೆಯಲು ಮಾಡಿದ ತಂತ್ರವು ಇದೆಂಬುದು ನೂರಕ್ಕೆ ನೂರು ತಿಳಿದಿದೆ.

ಕರ್ನಾಟಕ ರಾಜ್ಯದಿಂದ ಹಲವಾರು ಮಂದಿ ವಕೀಲರುಗಳು ಈ ಮೇಳಕ್ಕೆ ಹೋಗಿದ್ದರು. ಕೇವಲ ಮೂವತ್ತು ರೂಪಾಯಿ ತೆತ್ತರೆ ನವದೆಹಲಿ ತನಕ ಹೋಗಿ, ಅಲ್ಲಿಯ ಊಟ, ಉಪಚಾರ, ಉಳಿದುಕೊಳ್ಳುವ ವೆಚ್ಚವೆಲ್ಲಾ ಸೇರಿ, ಮತ್ತೆ ವಾಪಾಸು ಬರುವ ವ್ಯವಸ್ಥೆಯನ್ನು ಸಂಘಟಕರು ಮಾಡಿದ್ದರಂತೆ. ಇಷ್ಟರಲ್ಲಿ ನವದೆಹಲಿಗೆ ಹೋಗಿ ಬರುವ (ಅಲ್ಲಿನ ಎಲ್ಲಾ ವೆಚ್ಚವೂ ಸೇರಿ) ವ್ಯವಸ್ಥೆಯನ್ನು ನೂರಾರು ಮಂದಿಗೆ ಮಾಡಬೇ

ಸಂಪಾದಕೀಯ

ಕಾದರೆ ಅಧಿಕಾರದ ದುರುಪಯೋಗದಿಂದಲ್ಲದೆ ಬೇರೆ ಹೇಗೆ ಸಾಧ್ಯ? ಅಂತೂ, ಇಷ್ಟರ ತನಕ ರೈಲು ಪ್ರಯಾಣ ಮಾಡದವರು ಅಥವಾ ಡೆಲ್ಲಿ ನೋಡದ ನೂರಾರು ಮಂದಿ ಅಲ್ಲಿಗೆ ಹೋಗಿ ಬರುವಂತಾಗಿದೆ. ಸಮಾವೇಶದ ಪ್ರಾರಂಭದಲ್ಲಿದ್ದ 1500 ಮಂದಿ ಕೊನೆ ತನಕ ಇರಲಿಲ್ಲವಂತೆ, ಕೊನೆಗೆ ಕೆಲವೇ ನೂರು ಮಂದಿ ಇದ್ದರಂತೆ. ಅಲ್ಲಿದ್ದವರ ತೀವ್ರ ಪ್ರತಿಭಟನೆಯಿಂದಾಗಿ ನಿರ್ಣಯವನ್ನು ಮಂಡಿಸುವ ವಿಚಾರವನ್ನು ಕೈಬಿಡುವಂತೆ ಮಾಡಿದರೆಂಬ ವರದಿಯೂ ಇದೆ.

ಆರ್ಥಿಕ ಮುಗ್ಗಟ್ಟು ತೀವ್ರವಾಗುತ್ತಿದ್ದಂತೆಯೆ, ಸಾಮಾಜಿಕ-ರಾಜಕೀಯ ಬಿಕ್ಕಟ್ಟುಗಳು ಆಳವಾಗುತ್ತಿದಂತೆಯೆ, ಆಳುವ ಪಕ್ಷದ ವೈಫಲ್ಯ ಜನತೆಗೆ ಅರ್ಥವಾಗತೊಡಗಿದೆ. ಜನತೆಯ ಹೋರಾಟ ಬೆಳೆಯುತ್ತಿದೆ. ಈ ಹಿನ್ನೆಲೆಯಲ್ಲಿ ಇಂದಿರಾಗಾಂಧಿಯವರು ಹೆಚ್ಚು ಹೆಚ್ಚು ಸರ್ವಾಧಿಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದು ಕಂಡುಬರುತ್ತಿದೆ. ಇತ್ತೀಚೆಗಿನ "ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆ"ಯಿಂದಂತೂ ಇದು ಸ್ಪಷ್ಟ. ಆದರೆ ಈ ಎಲ್ಲಾ ಕ್ರಮಗಳಿಗಿಂತಲೂ ಉತ್ತಮವಾಗಿ, ತನ್ನ ಅಧಿಕಾರವನ್ನು ಮುಂದುವರೆಸುವುದು ಸಾಧ್ಯವಾಗುವಂತೆ ಮಾಡುವ ಕುತಂತ್ರ ಇಂದಿರಾ

[ಕಡೆಯ ಪುಟ ನೋಡಿ]

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾಗಿ ಹೋರಾಡಬೇಕು

"ಕೇಂದ್ರದಲ್ಲಿ ಸುಭದ್ರ ಸರಕಾರವನ್ನು ರಚಿಸಿ ಬೆಲೆಗಳನ್ನು ಇಳಿಸುತ್ತೇವೆಂದು ಜನತೆಗೆ ಭರವಸೆ ನೀಡಿ ಮೂರನೇ ಎರಡರಷ್ಟು ಬಹುಮತದಿಂದ ಆರಿಸಿ ಬಂದಿರುವ ಇಂದಿರಾಗಾಂಧಿ ಸರಕಾರದ ಕಳೆದ ಒಂಭತ್ತು ತಿಂಗಳ ಆಡಳಿತದ ಫಲವೇ ಇಂದಿನ ಬೆಲೆಏರಿಕೆ, ಕೋಮುವಾದಿ ಗಲಭೆಗಳು ಮತ್ತು ಹೆಚ್ಚುತ್ತಿರುವ ಸ್ತ್ರೀಯರ ಮೇಲಿನ ಅತ್ಯಾಚಾರ ಅರಾಜಕತೆಗಳೇ ಆಗಿದೆ. ಇದನ್ನು ವಿರೋಧಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾಗಬೇಕು, ಹೋರಾಟ ನಡೆಸಬೇಕೆಂದು" ಕಾಸರಗೋಡು ಕ್ಷೇತ್ರದ ಲೋಕಸಭಾ ಸದಸ್ಯರಾದ ಕಾಂ. ಎಂ. ರಾಮಣ್ಣರೈಯವರು ಕರೆ ನೀಡಿದರು.

ನಾಲ್ಕು ದಿನಗಳಿಂದ ಉಡುಪಿಯಲ್ಲಿ ಸಭೆ ಸೇರಿದ ಸಿ.ಐ.ಟಿ.ಯು. ವಿನ ಕರ್ನಾಟಕ ರಾಜ್ಯ ಮಂಡಳಿ ಸಭೆಯ ಅಂಗವಾಗಿ ಉಡುಪಿ ರಥ ಬೀದಿಯಲ್ಲಿ 26ರಂದು ಜರಗಿದ ಬೃಹತ್ ಸಭೆಯಲ್ಲಿ ರಾಮಣ್ಣರೈ ಮಾತನಾಡುತ್ತಿದ್ದರು.

"ಕೇರಳದ ಜನತೆ ಇಂದಿರಾ ಕಾಂಗ್ರೆಸ್ಸನ್ನು ತಿರಸ್ಕರಿಸಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಆರಿಸಿದೆ. ಕೇರಳದ ಇಂದಿನ ಸರಕಾರವು ಜನತೆಯ ಮುಂದೆ ಬದಲಿ ಕಾರ್ಯಕ್ರಮವೊಂದನ್ನು ಇರಿಸಿದೆ. ಇದು ಇಂದಿರಾ ಸರಕಾರದ ಜನವಿರೋಧಿ ನೀತಿಗಿಂತ ಭಿನ್ನವಾಗಿದೆ. ಜನತೆಯ ಪ್ರಜಾಪ್ರಭುತ್ವದ ಮತ್ತು ಹೋರಾಟದ ಹಕ್ಕುಗಳನ್ನು ರಕ್ಷಿಸಲಾಗಿದೆ-ವಿಸ್ತರಿಸಲಾಗಿದೆ. ದುಡಿಯುವ ಜನತೆಗೆ ಕಾನೂನಿನ ಚೌಕಟ್ಟಿನಲ್ಲಿ-ರಾಜ್ಯ ಸರಕಾರಕ್ಕೆ ಸೀಮಿತ ಅಧಿಕಾರವಿದ್ದರೂ ಕೂಡಾ-ಅನೇಕ ಸವಲತ್ತುಗಳನ್ನು ನೀಡಲಾಗಿದೆ. ಉದಾಹರಣೆಗೆ ಬೆಳೆ ನಷ್ಟವಾದಲ್ಲಿ ರೈತರಿಗೆ ವಿಮೆಯ ಯೋಜನೆ, ಮೀನುಗಾರರಿಗೆ ಅಪಘಾತ ಪರಿಹಾರ ವಿಮೆ ಮತ್ತು ರಾಜ್ಯ ಸರಕಾರಿ ನೌಕರರಿಗೆ ಸಂಘಟನೆಯ ಹಕ್ಕುಗಳ ವಿಸ್ತರಣೆ ಇತ್ಯಾದಿಗಳಾಗಿವೆ."

ಎಡರಂಗದ ಸರಕಾರಗಳನ್ನು ರಕ್ಷಿಸುವ ಹೊಣೆಗಾರಿಕೆ ಸಮಸ್ತ ದುಡಿಯುವ ಜನತೆಯ ಮುಂದಿದೆ. ಕೇರಳ

[ಕಡೆಯ ಪುಟ ನೋಡಿ]

ಕೋಲಾರ: ಜ್ವಲಿಸುತ್ತಿರುವ ಜ್ವಾಲಾಮುಖಿ

ಕೋಲಾರ ಜಿಲ್ಲೆ, ರಾಜ್ಯದಲ್ಲಿ ಅತ್ಯಂತ ಕಡಿಮೆ ಮಳೆ ಬೀಳುವ ಜಿಲ್ಲೆಗಳಲ್ಲಿ ಒಂದು. ಈ ಸಾಲಿನಲ್ಲಿ ಮುಂಗಾರು ಮಳೆ ಬೀಳದೆ ಪೂರ್ಣವಾಗಿ ಮುಖ್ಯ ಮುಂಗಾರು ಬೆಳೆಗಳಾದ ರಾಗಿ, ಬತ್ತ ಮತ್ತು ಕಡಲೇಕಾಯಿ ಬೆಳೆಗಳು ಸಂಪೂರ್ಣ ನಾಶವಾಗಿದೆ. ಜಿಲ್ಲೆಯ ಬಹುತೇಕ ಪ್ರದೇಶಗಳಲ್ಲಿ ಬಿತ್ತನೆಯೇ ಆಗಿಲ್ಲ. ಮತ್ತು ಬಿತ್ತನೆಯಾಗಿರುವ ಕಡೆ ಬೆಳೆಗಳು ಮಳೆಯ ಅಭಾವದಿಂದ ನಾಶವಾಗಿವೆ. ಕೆರೆ ಕುಂಟೆಗಳಿಗೆ ನೀರು ಬರದೆ ಇರುವುದರಿಂದ ಬಾವಿಗಳಲ್ಲಿ ಸಿಗುತ್ತಿದ್ದ ನೀರಿನ ಪ್ರಮಾಣ ಅರ್ಧದಷ್ಟು ಕಡಿಮೆಯಾಗಿದೆ. ಇನ್ನು ಮುಂದಿನ ವರ್ಷದವರೆಗೂ ಯಾವ ಬೆಳೆಯೂ ರೈತರ ಕೈಸೇರುವ ನಿರೀಕ್ಷೆ ಇಲ್ಲ. ಜಿಲ್ಲೆಯಾದ್ಯಂತ ಹಳ್ಳಿಗಾಡಿನ ಪರಿಸ್ಥಿತಿ ತೀರಾ ಶೋಚನೀಯವಾಗಿದ್ದು, ಆಹಾರಪದಾರ್ಥಗಳು ಮತ್ತು ಜಾನುವಾರುಗಳ ಮೇವಿಗೆ ತುಂಬಾ ಅಭಾವ ಉಂಟಾಗಿ ರೈತರು ತಮ್ಮ ತಮ್ಮ ಜಾನುವಾರುಗಳನ್ನು ಕಳೆದುಕೊಳ್ಳುವ ಮತ್ತು ತೀವ್ರ ನಿರುದ್ಯೋಗ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಜಿಲ್ಲೆಯನ್ನು ಕ್ಷಾಮಪೀಡಿತ ಪ್ರದೇಶವೆಂದು ಸಾರಿ ಬಡರೈತರಿಗೆ ಮತ್ತು ವ್ಯವಸಾಯ ಕೂಲಿಕಾರರಿಗೆ ಪೂರ್ಣ ಉದ್ಯೋಗ ಮತ್ತು ದನಗಳಿಗೆ ಮೇವನ್ನು ಒದಗಿಸುವ ತಮ್ಮ ಕರ್ತವ್ಯವನ್ನು ನಿರ್ವಹಿಸುವಲ್ಲಿ ಸರಕಾರ ಪೂರ್ತಿಯಾಗಿ ವಿಫಲವಾಗಿದೆ.

ಕೋಲಾರ ಜಿಲ್ಲೆಯಲ್ಲಿ ಯಾವುದೇ ರೀತಿಯ ದೊಡ್ಡ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಸಾಧ್ಯತೆ-ಇಲ್ಲವಾಗಿದೆ. ಹಾಲಿ ಇರುವ ನೀರಾವರಿ ಕೆರೆಗಳು ಸಹ ಕ್ರಮೇಣ ಹೂತು ಹೋಗುತ್ತಿವೆ. ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ನೂರಾರು ಬಾವಿಗಳಿಗೆ ವಿದ್ಯುತ್‌ಶಕ್ತಿ ಸರಬರಾಜು ದೊರೆಯದೆ ರೈತರು ಕಂಗಾಲಾಗಿದ್ದಾರೆ. ಶ್ರೀ ಗುಂಡೂರಾಯರು 85 ಕೋಟಿ ರೂಪಾಯಿಗಳ ರಿಯಾಯಿತಿಯನ್ನು ರೈತರಿಗೆ ಕೊಟ್ಟಿರುವುದಾಗಿ ವಿಧಾನ ಮಂಡಲದಲ್ಲಿ ಪ್ರಕಟಿಸಿದರು. ಆದರೆ ಈ ಪೈಕಿ ವಿದ್ಯುತ್‌ಶಕ್ತಿ ದರದಲ್ಲಿ ಯೂನಿಟಿಗೆ 5 ಪೈಸೆ ಮತ್ತು ಸಣ್ಣ ರೈತರ ಸಾಲವಸೂಲಿಯನ್ನು ಡಿಸೆಂಬರ್‌ವರೆಗೂ ಮುಂದೂಡಿರುವುದು, ಕೇವಲ 60 ಲಕ್ಷ ರೂಪಾಯಿಗಳನ್ನು ಸಣ್ಣ ರೈತರ ಸಾಲವಸೂಲಿಯನ್ನು ಮಾಫಿಮಾಡಲು ಹೊರಡಿಸಿರುವ ಆಜ್ಞೆ ಇವುಗಳನ್ನು ಬಿಟ್ಟರೆ ಮತ್ತೆ ಯಾವ ಸೌಲಭ್ಯವೂ ರೈತರಿಗೆ ಸಿಕ್ಕಲಿಲ್ಲ. 85 ಕೋಟಿ ರೂಪಾಯಿಗಳು ಯಾವ ಯಾವ ಬಾಬಿನಲ್ಲಿ ರೈತರಿಗೆ ಎಷ್ಟೆಷ್ಟು ಸಹಾಯವಾಗುವುದೆಂಬ ವಿವರವೂ ಸರ್ಕಾರದಲ್ಲಿ ಇಲ್ಲ. ಇದು ರೈತರ ಕಣ್ಣೊರಸುವ ಮೋಸ.

ಸರಕಾರದ ಈ ನಾಟಕಗಳಿಂದೆಲ್ಲ ಕೋಲಾರ ಉರಿದೇಳುತ್ತಿದೆ, ಕೇವಲ ಸೊಪ್ಪನ್ನು ತಿಂದು ಬದುಕಬೇಕಾದ ಪರಿಸ್ಥಿತಿಯಿಂದ ಜನತೆಯ ಕಣ್ಣೆದುರು ಹೋರಾಟದ ಮಾರ್ಗವೊಂದೇ ಕಾಣುತ್ತಿರುವುದು. ತೆಲಂಗಾಣ ರೈತರ ವೀರೋಚಿತ ಹೋರಾಟದ ಛಾಯೆ ಕೋಲಾರದ ಕೆಲವೆಡೆ ಗಾಢವಾಗಿದೆ. ಕ್ರಾಂತಿಕಾರಿ ಹೋರಾಟದ ಪರಂಪರೆ ಇರುವ ಕೋಲಾರದ ಜನತೆ ಅನೇಕ ಹೋರಾಟಗಳಲ್ಲಿ ಪಾಲ್ಗೊಂಡಿದ್ದಾರೆ. 1972ರಲ್ಲಿ ದಿ॥ ಕಾಂ. ಎಂ. ಕೆ. ಜಿ. ನೇತೃತ್ವದಲ್ಲಿ ನಡೆದ ಅಪೂರ್ವ "ಭೂ-ಆಕ್ರಮಣ" ಚಳುವಳಿ ಜನಮನದಲ್ಲಿ ಹಸಿರಾಗಿದೆ. ಸಕ್ರಿಯವಾಗಿ ಆ ಹೋರಾಟಗಳಲ್ಲಿ ಪಾಲ್ಗೊಂಡಿದ್ದ ಧೀರರನ್ನು ಜಿಲ್ಲೆಯಿಂದಲೇ ಗಡಿಪಾರು ಮಾಡಿದ್ದನ್ನೂ ಜನ ಮರೆತಿಲ್ಲ.

ನರಗುಂದ, ಶಿವಮೊಗ್ಗ ಮುಂತಾದ ಕಡೆ ರೈತರು ತುಘಲಕ್ ದರ್ಬಾರದ ವಿರುದ್ಧ ಸಿಡಿದೆದ್ದುದು ಕೋಲಾರದ ಜನತೆಗೆ ಸ್ಫೂರ್ತಿಯೊದಗಿಸಿ ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗುವಂತೆ ಮಾಡಿತು.

ಜಿಲ್ಲೆಯನ್ನು ಕ್ಷಾಮ ಪೀಡಿತ ಪ್ರದೇಶವೆಂದು ಪರಿಗಣಿಸಿ, ಪರಿಹಾರ ಕಾಮಗಾರಿಗಳನ್ನು ತಕ್ಷಣ ಪ್ರಾರಂಭಿಸಬೇಕೆಂದು ಸರಕಾರಕ್ಕೆ ಒತ್ತಾಯಿಸುವ ಕಾರ್ಯಕ್ರಮಗಳು ಕಳೆದ ತಿಂಗಳಿಂದಲೇ ರೂಪುಗೊಳ್ಳುತ್ತಿದ್ದವು. ಕರ್ನಾಟಕ ರಾಜ್ಯ ಪ್ರಾಂತ ರೈತಸಂಘದ ಕೋಲಾರ ಜಿಲ್ಲಾ ಘಟಕ ಮತ್ತು ಇತರ ವಿರೋಧ ಪಕ್ಷಗಳ ಜಂಟಿ ಹೋರಾಟ ಸಮಿತಿಯೊಂದು ಜನತಾ ರೈತರನ್ನು ಹೋರಾಟಕ್ಕೆ ಅಣಿನೆರೆಸಲು ಸಿದ್ಧವಾದವು.

ರೈತ ಕ್ರಿಯಾಸಮಿತಿ 23-10-80 ರಂದು ಕೋಲಾರದಲ್ಲಿ ಬೃಹತ್ ಮೆರವಣಿಗೆ ಹೊರಡಿಸಿ ಸರಕಾರದ

[ಕಡೆಯ ಪುಟ ನೋಡಿ]

ಸಂಕ್ಷಿಪ್ತ ವಾರ್ತೆಗಳು

ಕೋಟೇಶ್ವರ :

ದಿನಾಂಕ 7-10-80ರಂದು ಕುಂದಾಪುರ ತಾಲ್ಲೂಕಿನ ಕೋಟೇಶ್ವರ ಗ್ರಾಮದಲ್ಲಿ ಡಿ. ವೈ. ಓ.ನ ಗ್ರಾಮ ಸಮಿತಿಯನ್ನು ರಚಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕುಂದಾಪುರ ತಾಲ್ಲೂಕು ಡಿ. ವೈ. ಓ ನ ಕಾರ್ಯದರ್ಶಿ ವಿ. ಮಹಾಬಲ ದೇವಾಡಿಗರು ವಹಿಸಿದ್ದರು.

ಅಮ್ಮಾಡಿ :

ಬಂಟ್ವಾಳ ತಾಲ್ಲೂಕಿನ ಅಮ್ಮಾಡಿಯ ಸಹಕಾರಿ ಸೇವಾ ಬ್ಯಾಂಕಿನ ಡೈರೆಕ್ಟರ ಸ್ಥಾನಕ್ಕೆ, 30-9-80ರಂದು ನಡೆದ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಸಮಿತಿಯ ಸದಸ್ಯ ಕಾಂ. ಬಿ. ಎಚ್. ಬಂಗೇರಾರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ರಾಯಚೂರು :

ದಿನಾಂಕ 5-10-80 ರಂದು ರಾಯಚೂರಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಎಲ್ಲ ವಿರೋಧ ಪಕ್ಷಗಳ ಮುಖಂಡರುಗಳ ಕಾರ್ಮಿಕ ಮುಖಂಡರುಗಳ ಮತ್ತು ಇತರ ಪ್ರಜಾಪ್ರಭುತ್ವವಾದಿಗಳ ಸಭೆ ನಡೆದು ದೇಶದ ಪ್ರಸಕ್ತ ವಿದ್ಯಮಾನಗಳನ್ನು ಪರಿಶೀಲಿಸಲಾಯಿತು. ಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಜಂಟೀ ಹೋರಾಟಗಳನ್ನು ರೂಪಿಸಬೇಕೆಂಬ ಆಶಯ ವ್ಯಕ್ತಪಡಿಸಲಾಯಿತು.

ಬೆಳ್ತಂಗಡಿ :

ದಿನಾಂಕ 5-10-80ರಂದು ಬೆಳ್ತಂಗಡಿಯ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಶಾಖೆಯ ಸಭೆಯು ಶ್ರೀ ಅಮ್ಮು ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಬೆಳ್ತಂಗಡಿ ತಾಲ್ಲೂಕು ಸಮಿತಿಯ ಸಂಚಾಲಕರಾದ, ಡಾಕಯ್ಯನವರು ಮಾತನಾಡುತ್ತಾ "ಇಂದಿನ ಅಪಮಾನತೆಯನ್ನು ಹೋಗಲಾಡಿಸಲು ದಲಿತರು ಹಳ್ಳಿ, ಹಳ್ಳಿಗಳಲ್ಲಿ ಸಂಘಟಿತರಾಗಿ ಹೋರಾಡಬೇಕೆಂದು ಕರೆಕೊಟ್ಟರು.

ಗುಲ್ಬರ್ಗ :

ಶೈಕ್ಷಣಿಕ ವರ್ಷದ ಅಂಗವಾಗಿ ಭಾರತ ವಿದ್ಯಾರ್ಥಿ ಫೆಡರೇಷನ್‌ನ ಸಂಘಟನೆ ಬಗ್ಗೆ ಚರ್ಚಿಸಲು ದಿನಾಂಕ 5-10-80ರಂದು ಸಭೆ ಸೇರಿತ್ತು. ಹಾಗೂ ಹೊಸ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ತಿಪಟೂರು :

ನಗರದ ಕೂಲಿಕಾರರು ವಾಸಿಸುತ್ತಿದ್ದ ಇಂದಿರಾನಗರ ಬಡಾವಣೆಯಲ್ಲಿ ದಿನಾಂಕ 8-10-80 ರಂದು ಗುಡಿಸಲುಗಳಿಗೆ ಬೆಂಕಿಬಿದ್ದು ಸುಮಾರು ಒಂದು ಲಕ್ಷ ರೂ, ನಷ್ಟವಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಕೂಡಲೇ ಸ್ಥಳಕ್ಕೆ ಧಾವಿಸಿ ನಿರ್ಗತಿಕರಾದ ಕೂಲಿಕಾರರನ್ನು ಸ್ವಾಂತನಪಡಿಸಿ, ನೊಂದವರಿಗೆ ತಕ್ಷಣ ಪರಿಹಾರ ಕೊಡಲು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಕುಂಬಳೆ :

ಕುಂಬಳೆ ಪಂಚಾಯತ್‌ನ "ಕೇರಳ ರಾಜ್ಯ ರೈತಸಂಘ" ಕಾರ್ಯಕರ್ತರ ಸಭೆಯು ದಿನಾಂಕ 17-10-80 ರಂದು ಕುಂಬಳೆಯಲ್ಲಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಭಂಡಾರಿಶೆಟ್ಟಿಯವರು ವಹಿಸಿದ್ದರು, ಸಭೆಯಲ್ಲಿ ಕಾಂ. ಬಿ. ಎಂ. ರಾಮಯ್ಯ ಶೆಟ್ಟಿ, ಕಾಂ. ರಾಮಚಂದ್ರಗಟ್ಟಿ ಮತ್ತು ಕಾಂ. ವಾಸು ಮೊದಲಾದವರು ಮಾತನಾಡಿದರು. 30-10-80 ರಂದು ಕಾಲುನಡಿಗೆ ಜಾಥಾವನ್ನು ಪ್ರಾರಂಭಿಸಿ ಕಣ್ಣನೂರ ಜಿಲ್ಲಾಧಿಕಾರಿಗಳ ಆಫೀಸಿನ ಎದುರು ಮುಷ್ಕರ ನಡೆಸಲು ತೀರ್ಮಾನಿಸಲಾಯಿತು.

ಭದ್ರಾವತಿ :

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ನಾಗರಿಕ ಸಭೆಯು ಕರೆಯ ಮೇರೆಗೆ, ದಿನಾಂಕ 13-10-80 ರಂದು "ನಗರ ಶಾಂತಿಸಮಿತಿ" ಸಮಾವೇಶಗೊಂಡು, ನಗರದಲ್ಲಿ ಉದ್ಭವಿಸಿರುವ ಕೋಮು ಗಲಭೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು. ನಗರದಲ್ಲಿ ನಡೆಯುತ್ತಿರುವ ಪೋಲೀಸ್ ದೌರ್ಜನ್ಯವನ್ನು ತಡೆಯಲು ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು. ತಾಲ್ಲೂಕಿನ ಶಾಸಕರೂ ಸಭೆಯಲ್ಲಿ ಭಾಗವಹಿಸಿದ್ದರು

ಪದವು :

ದ. ಕ. ಜಿಲ್ಲೆ ಮೂಡಶೆಡ್ಡೆ ಗ್ರಾಮದಲ್ಲಿ ಪದವು ಪ್ರದೇಶ ಬೀಡಿ ಕಾರ್ಮಿಕರ ಸಭೆಯು ಕಾಂ. ಕೆ. ಆರ್. ಶ್ರೀಯಾನ್‌ರವರ ಅಧ್ಯಕ್ಷತೆಯಲ್ಲಿ 19-10-80ರಂದು ಜರುಗಿತು. ಪ್ರಾರಂಭದಲ್ಲಿ ಸಂಘದ ಉಪಾಧ್ಯಕ್ಷ ಕಾಂ. ಕೆ. ಸದಾನಂದನವರು ಸ್ವಾಗತಿಸಿದರು.

ಸಂಘದ ಕಾರ್ಯದರ್ಶಿ ಕೆ. ಬಾಬುದೇವಾಡಿಗನವರು ಹಾಗೂ ಕೋಶಾಧಿಕಾರಿ ಕಾಂ. ಸಿ. ನಾರಾಯಣರವರು ಸಭೆಯಲ್ಲಿ ಮಾತನಾಡುತ್ತಾ ಬೀಡಿ ಮಜೂರರ ಸಮಸ್ಯೆಗಳು ಹಾಗೂ ಸಂಘಟನೆಯ ಆವಶ್ಯಕತೆಯ ಬಗ್ಗೆ ಸಭೆಯಲ್ಲಿ ವಿವರಿಸಿದರು, ಸಂಘದ ಅಧ್ಯಕ್ಷ ಕಾಂ. ಶ್ರೀಯಾನ್‌ರವರು ಮಾತನಾಡುತ್ತಾ ಮಜೂರರು ಹೋರಾಟದಿಂದ ಗಳಿಸಿದ ಸವಲತ್ತುಗಳನ್ನು ನ್ಯಾಯವಾದ ರೀತಿಯಲ್ಲಿ ವಿತರಣೆ ಮಾಡದೆ ಮಜೂರರಿಗೆ ವಂಚಿಸುವ ಕಂಟ್ರಾಕ್ಟದಾರರು ಹಾಗೂ ಬೀಡಿ ಮಾಲೀಕರನ್ನು ಖಂಡಿಸಿದರು.

ಮಂಗಳೂರು :

ದಿನಾಂಕ 19-10-80 ರಂದು ಮಂಗಳೂರಿನ ಉರ್ವ ಸ್ಟೋರ್‌ನಲ್ಲಿ ಬೀಡಿಕಾರ್ಮಿಕರ ಸಭೆ ನಡೆಯಿತು, ಕಾಂ. ಡಿ. ಆನಂದ್ ಮತ್ತು ಕಾಂ. ಎಚ್. ಗೋಪಾಲನವರು ಮಾತನಾಡುತ್ತಾ ಬೀಡಿಕಾರ್ಮಿಕರ ಇಂದಿನ ಮಜೂರಿಯನ್ನು ಬದಲಾಯಿಸಲು ತೀವ್ರ ಹೋರಾಟಕ್ಕೆ ಕರೆಯಿತ್ತರು, ನಾನಾ ವಿಧಗಳಿಂದ ಮಜೂರರನ್ನು ಕಾನೂನಿನ ಸೌಲಭ್ಯಗಳಿಂದ ವಂಚಿಸುವ ಕಂಟ್ರಾಕ್ಟದಾರರ ನೀತಿಯನ್ನು ಉಗ್ರವಾಗಿ ಖಂಡಿಸಿದ ಅವರುಗಳು, 28-10-80ರಿಂದ 31-10-80ರವರೆಗೆ ಮಂಗಳೂರಿನಲ್ಲಿ ಅಸಿಸ್ಟೆಂಟ್ ಲೇಬರ್ ಕಮೀಷನರ ಕಛೇರಿ ಮುಂಭಾಗ ನಡೆಯುವ ಸತ್ಯಾಗ್ರಹದಲ್ಲಿ ಭಾಗವಹಿಸಬೇಕಾಗಿ ಕೋರಿದರು. ನಂತರ ಶ್ರೀಮತಿ ಲೀಲಾವತಿಯವರು ಕಾರ್ಯದರ್ಶಿಯಾಗಿರುವ 8 ಜನರ ಪ್ರಾದೇಶಿಕ ಸಮಿತಿಯನ್ನು ರಚಿಸಲಾಯಿತು.

ಕುಂಬಳೆ :

ಕುಂಬಳೆಯಲ್ಲಿ ಎಸ್. ಎಫ್. ಐ. ಯ ಸಭೆಯು ದಿನಾಂಕ 17-10-80 ರಂದು ನಡೆಯಿತು. ಕೆ. ಭಾಸ್ಕರ ಅವರು ಸ್ವಾಗತವನ್ನು ಬಯಸಿದರು. ಅಧ್ಯಕ್ಷತೆಯನ್ನು ಕಾಂ. ಎಂ. ಆನಂದ ಅವರು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಕಾಂ. ವಿಶ್ವನಾಥ ಆಳ್ವ, ಕಾಂ ಕುಂಞಂಬು ಮತ್ತು ಕಾಂ. ಜಯರಾಜನ್ ಮಾತನಾಡಿದರು. ನಂತರ ಕಾಂ. ಶಶಿ ಅಧ್ಯಕ್ಷರಾಗಿರುವ 1980-81ನೇ ಸಾಲಿನ, ಹೊಸ ಕಮಿಟಿ ರಚಿಸಲಾಯಿತು.

ದಾಂಡೇಲಿ :

ದಾಂಡೇಲಿ ಹತ್ತಿರದ "ನಾಗರಿ ವೈನ್ಸ್ ಕರ್ನಾಟಕ ಎಂಟರ್‌ಪ್ರೈಸಸ್" ನಲ್ಲಿ ಕೆಲಸ ಮಾಡುವ 67 ಜನ ಕಾರ್ಮಿಕರನ್ನು ಮುನ್ಸೂಚನೆ ಇಲ್ಲದೇ ಕೆಲಸದಿಂದ ತೆಗೆದುದನ್ನು ಪ್ರತಿಭಟಿಸಲು ದಿನಾಂಕ 24-10-80ರಂದು ಚಾಪೋಲಿ ಮತ್ತು ವೀರನೋಲಿಯ ಗಣಿಪ್ರದೇಶದಲ್ಲಿ ಬಹಿರಂಗ ಸಭೆ ನಡೆಯಿತು.

ಈ ಗಣಿಗಳಲ್ಲಿ ಕೆಲಸಮಾಡುವ ಕಾರ್ಮಿಕರ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ ಯಾವುದೇ ಪ್ರಾಥಮಿಕ ಸೌಲಭ್ಯಗಳಿಲ್ಲ. ಕಾರ್ಮಿಕರು ಸಿ. ಐ. ಟಿ. ಯು. ವಿನ ಆಶ್ರಯದಲ್ಲಿ ಸಂಘಟಿತರಾದ ವಿರ್ಲಿಯಾತ್ರ ಕಾರಣದಿಂದ ಆಡಳಿತವರ್ಗ ದಬ್ಬಾಳಿಕೆಯನ್ನಾರಂಭಿಸಿದೆ.

ಸಭೆಯನ್ನು ಉದ್ದೇಶಿಸಿ ಕಾಂ. ಜಿ. ವಿ. ಪವಾರ್, ಕಾಂ. ಮಹಾಲೆ ಮತ್ತಿತರರು ಮಾತನಾಡಿದರು.

ಕಾರ್ಮಿಕರನ್ನು ವಾಪಸ್ ತೆಗೆದುಕೊಳ್ಳಬೇಕೆಂಬ ಬೇಡಿಕೆಯನ್ನಿಟ್ಟು ದಾಂಡೇಲಿಯ ಲಾಲ್‌ಭಾಯಿ ಸರ್ಕಲ್ ಹತ್ತಿರ 23-10-80 ರಿಂದ ಅನ್ನ ಸತ್ಯಾಗ್ರಹ ಪ್ರಾರಂಭಿಸಲಾಗಿದೆ.

ಹಳೇಹರ್ಲಾಪೂರ :

ಹರಿಹರದ ಹತ್ತಿರದ ಗ್ರಾಮವಾದ ಹಳೇ ಹರ್ಲಾಪೂರದಲ್ಲಿ ಬೀದಿದೀಪಗಳಿಲ್ಲದೆ ತೊಂದರೆಪಡುತ್ತಿದ್ದ ನಾಗರಿಕರು ದಿನಾಂಕ 24-10-80 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ಹೋಗಿ ಕೆ ಇ ಬಿ ಅಧಿಕಾರಿಗಳ ವಿಳಂಬ ನೀತಿಯ ವಿರುದ್ಧ ಮತ ಪ್ರದರ್ಶನ ಮಾಡಿದರು. ಈಗ ಎಚ್ಚತ್ತಿರುವ ಅಧಿಕಾರಿ ಗ್ರಾಮಕ್ಕೆ ಮಾರನೇ ದಿನವೇ ಬೀದಿದೀಪಗಳನ್ನು ಹಾಕಿಸಿದ. ಈ ಮೆರವಣಿಗೆಯಲ್ಲಿ ಡಿ. ವೈ. ಓ. ಕಾರ್ಯಕರ್ತರೂ ಭಾಗವಹಿಸಿದ್ದರು.

○

ಕೇರಳ : ಆಡಳಿತದ ವಿಕೇಂದ್ರೀಕರಣ

ತ್ರಿವೇಂಡ್ರಂನಲ್ಲಿ ಅಕ್ಟೋಬರ್ 4 ರಂದು ಒಂದು ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ ಕೇರಳದ ಮುಖ್ಯ ಮಂತ್ರಿ ಇ. ಕೆ. ನಯನಾರ್‌ರವರು ರಾಜ್ಯದಲ್ಲಿ ಮುಂದಿನ ವರ್ಷದ ಆರಂಭದಲ್ಲಿ ರಚಿಸಲ್ಪಡುವ ಜಿಲ್ಲಾ ಪರಿಷತ್ತುಗಳು ಇಡೀ ದೇಶಕ್ಕೇ ಆಡಳಿತದ ವಿಕೇಂದ್ರೀಕರಣದ ವಿಷಯದಲ್ಲಿ ಒಂದು ಉದಾಹರಣೆಯಾಗಲಿದೆ ಎಂದಿದ್ದಾರೆ.

ಪಂಚಾಯತೀ ರಾಜ್ಯ ಕಾನೂನಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಗ್ರಾಮೀಣ ಉದ್ಧಾರದ ಮತ್ತು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಮಾತ್ರ ಅಧಿಕಾರಗಳಿದ್ದವು. ಆದರೆ ಕೇರಳದ ಕಾನೂನು,–ಕೇರಳ ಜಿಲ್ಲಾ ಆಡಳಿತ ಕಾನೂನು–ಇದಕ್ಕಿಂತ ತುಂಬಾ ಮುಂದೆ ಹೋಗುತ್ತದೆ.

ರಾಜ್ಯದಲ್ಲಿ ರಚಿಸಲ್ಪಡುವ ಜಿಲ್ಲಾ ಪರಿಷತ್ತುಗಳ ಕೆಲಸ ಗ್ರಾಮೀಣ ಅಭಿವೃದ್ಧಿಯನ್ನು ನೋಡಿಕೊಳ್ಳುವುದಷ್ಟೇ ಅಲ್ಲ. ರಾಜ್ಯಮಟ್ಟದಲ್ಲಿ ಮಾತ್ರ ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗುವ ಅಂಶಗಳನ್ನು ಬಿಟ್ಟು ಉಳಿದೆಲ್ಲಾ ಸರಕಾರೀ ಆಡಳಿತವನ್ನು ಅವು ನೋಡಿಕೊಳ್ಳುತ್ತವೆ. ಈ ರೀತಿ ರಾಜ್ಯಕ್ಕೆ ನಿಶ್ಚಿತವಾಗಿಯೂ ಹಾನಿಕಾರಕವಾದ ಕ್ಷೇತ್ರಗಳನ್ನು ಬಿಟ್ಟು ಉಳಿದೆಲ್ಲಾ ಅಧಿಕಾರಗಳನ್ನು ಜಿಲ್ಲಾ ಸಂಸ್ಥೆಗಳಿಗೆ ಬಿಟ್ಟುಕೊಡಲು ಕೇರಳದಲ್ಲಿ ಪ್ರಯತ್ನಿಸಲಾಗುತ್ತಿದೆ. ಹೀಗೆ ಸಮಸ್ಯೆಯನ್ನು ಪರಿಹರಿಸುವ ಪ್ರಯತ್ನವೇ ಇಲ್ಲಿ ಮೂಲಭೂತವಾಗಿ ಬೇರೆ ರೀತಿಯದು.

ಜಿಲ್ಲಾ ಪರಿಷತ್ತುಗಳು ತಮಗಾಗಿ ಯಾವುದೇ ತೆರಿಗೆಯನ್ನು ವಸೂಲು ಮಾಡುವುದಿಲ್ಲ ಆದರೆ ಇದರಿಂದ ಅವುಗಳ ಸ್ವಾಯತ್ತತೆಗೆ ಭಂಗ ಬರುವುದಿಲ್ಲ. ಏಕೆಂದರೆ ಜಿಲ್ಲಾ ಪರಿಷತ್ತುಗಳಿಗೆ ಹಣ ಮಂಜೂರು ಮಾಡುವುದನ್ನು ಈ ಕಾನೂನು ರಾಜ್ಯ ಸರಕಾರದ ನಿರ್ಣಯಕ್ಕೆ ಬಿಡುವುದಿಲ್ಲ. ಸಮಯ-ಸಮಯಕ್ಕೆ ಆರ್ಥಿಕ ಆಯೋಗವನ್ನು ನೇಮಿಸಿ ಅದರ ಶಿಫಾರಸುಗಳನ್ನಾಧರಿಸಿ ಹಣವನ್ನು ಮಂಜೂರು ಮಾಡಲಾಗುತ್ತದೆ.

ಇದರಲ್ಲಿ ರಾಜ್ಯ ಸರಕಾರ ಹಾಕಿಕೊಂಡ ಸಾಮಾನ್ಯ ಧೋರಣೆಗಳನ್ನು ಮಾಡುವುದು ಜಿಲ್ಲಾ ಪರಿಷತ್ತುಗಳಿಗೆ ಸಾಧ್ಯವಿಲ್ಲವೆಂಬುದು ನಿಜ.

ಕೇರಳ ಪಂಚಾಯತು ಕಾನೂನನ್ನು ವ್ಯಾಪಕವಾಗಿ ತಿದ್ದುಪಡಿ ಮಾಡಲಾಗಿದೆ. ಹೀಗೆ ತಿದ್ದುಪಡಿ ಮಾಡಿದ ಕಾನೂನಿನ ಅಂಶಗಳು ಜಾರಿಗೆ ಬಂದ ಮೇಲೆ ಪಂಚಾಯತ್ ಖಾತೆಯ ಅಧಿಕಾರಿಗಳಿಗೆ ಇದುವರೆಗೆ ಪಂಚಾಯತುಗಳ ಮೇಲೆ ಇದ್ದ ಹತೋಟಿಯ ಹೆಚ್ಚಿನ ಅಧಿಕಾರಗಳನ್ನು ಜಿಲ್ಲಾ ಪರಿಷತ್ತು ಚಲಾಯಿಸುತ್ತದೆ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಕಾರ್ಯಕಾರೀ ಅಧಿಕಾರಿಯ ಜಾಗದಲ್ಲಿ ಕಾರ್ಯಕಾರೀ ಮುಖ್ಯಸ್ಥರಾಗುತ್ತಾರೆ. ಕಾರ್ಯಕಾರೀ ಅಧಿಕಾರಿಗಳು ಪಂಚಾಯತಿಗೆ ಕಾರ್ಯದರ್ಶಿಗಳಾಗುತ್ತಾರೆ.

ಜಿಲ್ಲೆಯಲ್ಲಿನ ಪಂಚಾಯತಿಗಳ ಮೇಲಿನ ಹತೋಟಿ ಒಬ್ಬ ಸರಕಾರೀ ಇಲಾಖೆಯ ಅಧಿಕಾರಿಯಿಂದ ಒಂದು ಚುನಾಯಿತ ಮಂಡಳಿಗೆ ಹಸ್ತಾಂತರವಾಗುವುದರಿಂದ ಅದು ಜನರಿಗೆ ತಾನು ಹೆಚ್ಚು ಹೊಣೆಗಾರ ಎಂಬ ಭಾವನೆ ಬೆಳೆಯುತ್ತದೆಂದು ನಿರೀಕ್ಷಿಸಬಹುದು. ಇಂತಹ ವ್ಯವಸ್ಥೆಯಲ್ಲಿ ಯಾವ ಕ್ಷೇತ್ರವನ್ನೂ ನಿರ್ಲಕ್ಷಿಸುವ ಸಂಭವ ಕಡಿಮೆಯಾದ್ದರಿಂದ ಈ ಕಾನೂನಿನ ಪರಿಣಾಮವಾಗಿ ಅಭಿವೃದ್ಧಿಯಲ್ಲಿ ಸಮತೋಲನ ಹೆಚ್ಚುವುದೆಂದೂ ನಿರೀಕ್ಷಿಸಲಾಗಿದೆ. ●

ಆರ್ಥಿಕ ಸಮೀಕ್ಷೆ:

ಆರ್. ಚಂದ್ರ

ಸ್ವಜನ ಲಾಭಕ್ಕಾಗಿ ಮಾರುತಿ ರಾಷ್ಟ್ರೀಕರಣ !

ತಾ. 13-10-80 ರಂದು ಮಾರುತಿ ಕಾರು ಕಂಪೆನಿಯನ್ನು ರಾಷ್ಟ್ರೀಕರಿಸಲಾಯಿತು. ಎಪ್ಪತ್ತರ ದಶಕದ ಮೊದಲಿನಲ್ಲಿ ಪ್ರಾರಂಭವಾದ ಈ ಕಂಪೆನಿಯು ಇಂದಿರಾಗಾಂಧಿಯ ಮಗ ಸಂಜಯಗಾಂಧಿಯದ್ದು. ಇದರ ಉದ್ದೇಶ ಸಣ್ಣ ಸ್ವದೇಶಿ ಕಾರು ಉತ್ಪಾದನೆ ಮಾಡುವುದಾಗಿತ್ತು. ಆದರೆ, ಯಾವ ರೀತಿಯ ಕಾರೂ ತಯಾರಿಸದೆ ಈಗ ಕಂಪೆನಿ ದಿವಾಳಿಯಾಗಿದೆ. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟುಗಳಲ್ಲಿ ದಿವಾಳಿಯಾದ ಈ ಕಂಪೆನಿಯ ಋಣ ಪರಿಹಾರದ ವ್ಯವಹಾರಗಳು ನಡೆಯುತ್ತಿವೆ. ಗುಪ್ತ ಆಯೋಗದಿಂದ ತಿಳಿದು ಬಂದಂತೆ ಮಾರುತಿ ಪ್ರಕರಣವು ಮೊದಲಿನಿಂದ ಕೊನೆಯವರೆಗೂ ಮೋಸದ ಜಾಲವಾಗಿದೆ. ಅಂತಹ ಕಂಪೆನಿಯನ್ನು ಹಠಾತ್ತನೆ, ಪಾರ್ಲಿಮೆಂಟ್ ಇನ್ನೊಂದು ತಿಂಗಳಲ್ಲಿಯೇ ಅಧಿವೇಶನ ಸೇರಲಿದ್ದರೂ, ಇಂದಿರಾ ಸರಕಾರ ರಾಷ್ಟ್ರೀಕರಿಸಿದ ಉದ್ದೇಶವೇನು? ರಾಷ್ಟ್ರೀಕರಿಸಿದ ಈ ಕಂಪೆನಿಗೆ ಸುಮಾರು ರೂ. 5 ಕೋಟಿಯಷ್ಟು ಪರಿಹಾರ ನೀಡಲು ನಿರ್ಧರಿಸಿರುವ ಕಾರಣ ಏನು? ಈ ರಾಷ್ಟ್ರೀಕೃತ ಕಂಪೆನಿಯು ಮುಂದೆ ಏನನ್ನು ಸಾಧಿಸಲಿರುವುದು? ಕೇಳುವುದು ಯಾರನ್ನು? ಸಂಬಂಧಪಟ್ಟವರು ಯಾರೂ ತುಟಿಪಿಟಿಕ್ ಎನ್ನುವುದಿಲ್ಲ! ಕಾರಣ, ಪ್ರಧಾನಿ ಇಂದಿರಾಗಾಂಧಿಯ ಮಗ ಸಂಜಯಗಾಂಧಿಯ ದಿವಾಳಿಯಾದ ಕಂಪೆನಿಯನ್ನು ರೂ. 5 ಕೋಟಿ ಪರಿಹಾರ ಕೊಟ್ಟು ರಾಷ್ಟ್ರೀಕರಿಸಿದ್ದು, ಮಾತನಾಡಲು ಯಾರಿಗೆ ಧೈರ್ಯವಿದೆ?

ರಾಷ್ಟ್ರೀಯ ಆರ್ಥಿಕ ಅಭಿವೃದ್ಧಿಗನುಗುಣವಾಗಿ ಮೋಟಾರು ಕೈಗಾರಿಕೆಯನ್ನು ಆಧುನೀಕರಣಗೊಳಿಸುವುದು, ಪೆಟ್ರೋಲ್ ಇಂಧನ ಕಡಿಮೆ ಖರ್ಚಿನಲ್ಲಿ ಚಲಿಸುವ ಕಾರುಗಳನ್ನು ಹೆಚ್ಚು ಉತ್ಪಾದಿಸುವುದು, ಇವುಗಳಿಗೆಲ್ಲಾ ಮಾರುತಿ ಕಂಪೆನಿಯಲ್ಲಿರುವ ಮೂಲಭೂತ ಸವಲತ್ತುಗಳನ್ನು ಬಳಸಿಕೊಳ್ಳುವುದು, ವಿದೇಶಿ ಸಲಹೆ ಸಹಾಯಗಳನ್ನೂ ಸ್ವೀಕರಿಸುವುದು, ಇತ್ಯಾದಿ ಮಾರುತಿಕಂಪೆನಿಯ ರಾಷ್ಟ್ರೀಕರಣದ ಘೋಷಿತ ಘನ ಉದ್ದೇಶಗಳು. ಎಪ್ಪತ್ತರ ಪ್ರಾರಂಭದಲ್ಲಿ ಸ್ವದೇಶಿ ಕಾರು ತಯಾರಿಕೆಯ ಉದ್ದೇಶ ಸಾಧಿಸಲಾಗದೆ. ಎಂಭತ್ತರ ಪ್ರಾರಂಭದಲ್ಲಿ ವಿದೇಶಿ ನೆರವಿನಿಂದ ಕಾರು ತಯಾರಿಕೆಗೆ ಸನ್ನಾಹ, ಬಡತನ ನಿವಾರಣೆಯಲ್ಲಿ ಭಾರೀ ಮುನ್ನಡೆ! ಆರ್ಥಿಕ ಅಭಿವೃದ್ಧಿಗೆ ಇತ್ತೀಚಿನವರೆಗೂ ಕಾರು ತಯಾರಿಕೆಗೆ ಆದ್ಯತೆ ಕೊಟ್ಟಿಲ್ಲ. ಈಗ ಇದ್ದಕ್ಕಿದ್ದಂತೆ, ಕುಡಿಯುವ ನೀರು, ಆರೋಗ್ಯ, ವಸತಿ, ಮತ್ತಿತರ ಕಲ್ಯಾಣ ಕಾರ್ಯಕ್ರಮಗಳಿಗಿಂತಲೂ ದೇಶದಲ್ಲಿ ಕಾರು ತಯಾರಿ ಹೆಚ್ಚಿಸುವುದಕ್ಕೆ ಆದ್ಯತೆ ಸಿಕ್ಕಿದೆ. ಇದೊಂದು ಮಹತ್ವದ ಬದಲಾವಣೆಯೇ ಸರಿ!

ಇರಲಿ, ಮಾರುತಿ ಕಂಪೆನಿಯ ರಾಷ್ಟ್ರೀಕರಣದಿಂದ ಮೋಟಾರು ಕೈಗಾರಿಕೆಯ ಆಧುನೀಕರಣ ಆದೀತೆ? ಸಾಕಷ್ಟು ಕಾರುಗಳನ್ನು ಉತ್ಪಾದಿಸಬಹುದೇ? ಕಾರಿನ ಬೆಲೆಯು ಗ್ರಾಹಕರಿಗೆ ಸಿಲುಕೀತೇ? ಮಾರುತಿ ಕಂಪೆನಿಯಲ್ಲಿರುವ ಮೂಲಭೂತ ಸವಲತ್ತುಗಳೇನು? ಕಂಪೆನಿಯ ಆಸ್ತಿ ಮೌಲ್ಯ ಸುಮಾರು ರೂ. 6 ಕೋಟಿ ಎಂದು ಅಂದಾಜು ಮಾಡಲಾಗಿದೆ. ಆದರೆ, ಗುಪ್ತಆಯೋಗದ ವರದಿಯಂತೆ ಕಂಪೆನಿಯ ಕಟ್ಟಡಗಳಿರುವ ಸ್ಥಳದ ಬೆಲೆಯನ್ನೇ ಇನ್ನೂ ಪಾವತಿ ಮಾಡಲಿಲ್ಲವಂತೆ. ಕಂಪೆನಿಯ ಆಸ್ತಿಗಳ ವಿವರಗಳು ಇನ್ನೂ ಗೊತ್ತಿಲ್ಲ. ಆದರ ಆಸ್ತಿಯನ್ನು ನೇರಮಾರ್ಗವಾಗಿ ಪಡೆದಿರಲಿಕ್ಕಿಲ್ಲ. ಮೋಸ ಮತ್ತು ಬಲಾತ್ಕಾರಗಳಿಂದ ಪಡೆದುದಾಗಿದೆ. ಕಂಪೆನಿಗೆ ಅಕ್ರಮವಾಗಿ ಪಡೆದ 297 ಎಕರೆ ಸ್ಥಳವಿದೆ. ಅದರಲ್ಲಿರುವ ಯಂತ್ರೋಪಕರಣಗಳು ಈಗಾಗಲೇ ಹಳತಾಗಿ ತುಕ್ಕುಹಿಡಿದಿರಬಹುದು. ಅದರಲ್ಲಿರುವ ಕಾರ್ಮಿಕರ ಸಂಖ್ಯೆ ಕೇವಲ 25. ಮೋಟರ್ ಕೈಗಾರಿಕೆಯನ್ನು ಆಧುನೀಕರಣಗೊಳಿಸಲು ಮಾರುತಿ ಕಂಪೆನಿಯಲ್ಲಿ ಯಾವ ಸೌಲಭ್ಯಗಳೂ ಇಲ್ಲ. ಅದಕ್ಕಾಗಿ ರೂ. 250 ಕೋಟಿಯಷ್ಟು ಭಾರೀ ಯಂತ್ರೋಪಕರಣಗಳಿಗೆ ಹೊಸ ಬಂಡವಾಳ ಹಾಕಬೇಕಾದೀತು. ಇನ್ನೂ ರೂ. 200 ಕೋಟಿಗಳಷ್ಟು ಕೈಗಾರಿಕೆಯ ಉಪಸಂಸ್ಥೆಗಳ ಯಂತ್ರೋಪಕರಣಗಳಿಗಾಗಿ ಬಂಡವಾಳ ಹಾಕಬೇಕಾದೀತು. ಅಷ್ಟಾಗಿಯೂ, ತಯಾರಾದ ಕಾರು ಒಂದರ ಬೆಲೆಯು ರೂ. 75000ಕ್ಕಿಂತಲೂ ಹೆಚ್ಚಾಗಿರಬಹುದು. ಸಾಮಾನ್ಯ ಗ್ರಾಹಕರಿಗೆ ನಿಲುಕಲಾರದು. ರಾಷ್ಟ್ರೀಯ ಆರ್ಥಿಕ ಯೋಜನೆಯಲ್ಲಿ ರೂ. 450 ಕೋಟಿ ಹೊಸ ಬಂಡವಾಳ ಹಾಕಿ ಮೋಟಾರು ಉದ್ಯಮ ಅಭಿವೃದ್ಧಿಗೊಳಿಸುವುದು ಆದ್ಯತೆಯ ಕಾರ್ಯಕ್ರಮವಾಗಲಾರದು. ಹಾಗಾದರೆ, ಮಾರುತಿ ಕಂಪೆನಿಯ ರಾಷ್ಟ್ರೀಕರಣದ ಹಿಂದೆ ಬೇರೇನೋ ದುರುದ್ದೇಶವಿರಬೇಕು!

ಮಾರುತಿ ಕಂಪೆನಿಯ ರಾಷ್ಟ್ರೀಕರಣದಿಂದಾಗಿ ಈ ಸಂಸ್ಥೆಯ ಹಲವಾರು ನ್ಯೂನತೆಗಳನ್ನೂ, ಅತ್ಯಾಚಾರಗಳನ್ನೂ ಮರೆಮಾಚಿಸಲಾಗುವುದು. ಈ ಕಂಪೆನಿಯಲ್ಲಿ ಬಂಡವಾಳ ಹಾಕಿದವರು, ಠೇವಣಿ ಇಟ್ಟವರು ಸರ್ವಸಾಮಾನ್ಯವಾಗಿ ಸಂಜಯಗಾಂಧಿಯ ರಾಜಕೀಯ ಪ್ರಭಾವದ ಪ್ರಯೋಜನ ಪಡೆಯಲು ಉದ್ದೇಶಿಸಿರುವವರು. ಅಂತಹ ಪ್ರಯೋಜನವನ್ನು ಹಲವರು ಈಗಾಗಲೇ ಪಡೆದಿರಬಹುದು. ಹೆಚ್ಚಿನ ಶೇರುದಾರರು ಕೇವಲ ದಾಖಲೆಯ ಕಾಗದದಲ್ಲಿರುವವರು. ಗುಪ್ತಾಆಯೋಗ ತಿಳಿಸಿದಂತೆ, ಮಾರುತಿ ಶೇರುಗಳನ್ನು ಕಂಪೆನಿಯ ವ್ಯವಹಾರಗಳ ಕುರಿತು ಏನೇನೂ ತಿಳಿಯದವರಿಗೆ ಹಂಚಲಾಗಿತ್ತು. ಫೆಬ್ರವರಿ 77ರಲ್ಲಿ ಡೀಲರ್ ಶಿಪ್ ಠೇವಣಿಯ ಮರುಪಾವತಿ ಎಂದು ಅಥವಾ ಮಾರುತಿ ಶೇರುಗಳಿಗೆ ಅರ್ಜಿಫಾರಂನೊಂದಿಗೆ ಕಳಿಸಿದ ಮುಂಗಡ ಹಣ ಎಂಬ ನೆಪದಿಂದ ಭಾರೀ ಹಣವನ್ನು ಕಾಲ್ಪನಿಕ ಹೆಸರುಗಳಿಗೆ ಮರುಪಾವತಿಮಾಡಲಾಯಿತು.

ನಂತರ ಕಂಪೆನಿಯು ದಿವಾಳಿಯಾಗಿ ಋಣ ಪರಿಹಾರದ ವ್ಯವಹಾರಗಳು ಕೋರ್ಟುಗಳಲ್ಲಿ ನಡೆಯತೊಡಗಿದ್ದವು. ಆ ವ್ಯವಹಾರಗಳನ್ನು ಮುಂದುವರಿಸಲು ಬಿಟ್ಟಿದ್ದರೆ, ಕಂಪೆನಿಯ ಡೈರೆಕ್ಟರುಗಳ ಹೊಣೆಗಾರಿಕೆಯನ್ನು ಕೋರ್ಟು ನಿರ್ಧರಿಸುತ್ತಿತ್ತು. ಕಂಪೆನಿಗೆ ಸಲ್ಲಬೇಕಾದ ಹಣವನ್ನು ಡೈರೆಕ್ಟರುಗಳ ಖಾಸಗೀ ಆಸ್ತಿಗಳಿಂದ ವಸೂಲು ಮಾಡಲಾಗುತಿತ್ತು. ಸಂಜಯಗಾಂಧಿಯೂ ಒಬ್ಬ ಡೈರೆಕ್ಟರ್ ಆಗಿದ್ದುದರಿಂದ ಅವನ ಆಸ್ತಿಯಿಂದಲೂ ಕಂಪೆನಿಯ ನಷ್ಟ ಭರ್ತಿ ಮಾಡಬೇಕಾಗಿತ್ತು. ಆದರೆ, ಈಗ ಕಂಪೆನಿಯು ರಾಷ್ಟ್ರೀಕರಣವಾಗಿ 5 ಕೋಟಿ ಪರಿಹಾರ ಧನ ಸರಕಾರದಿಂದ ಸಿಗುವುದರಿಂದ ಕಂಪೆನಿಯ ಋಣ ಪರಿಹಾರವಾಗುವುದು. ಅವ್ಯವಹಾರಗಳಲ್ಲಿ ಪಾಲುಗೊಂಡ ಮಾರುತಿ ಸಂಸ್ಥೆಯ ಡೈರೆಕ್ಟರುಗಳು ನಷ್ಟದಿಂದ ಬದುಕಿಕೊಂಡರು! ಋಣ ಪರಿಹಾರದ ವ್ಯವಹಾರಗಳು ಕೋರ್ಟಿನಲ್ಲಿ ಮುಂದುವರಿದರೆ, ಕಂಪೆನಿಯ ಹಣ ಹೇಗೆ ದುರ್ವ್ಯಯವಾಗಿತ್ತು ಎಂದು ಬೆಳಕಿಗೆ ಬರುತ್ತಿತ್ತು. ಈಗ ಅದಕ್ಕೂ ಅವಕಾಶವಿಲ್ಲದಾಯಿತು!

ರಾಷ್ಟ್ರೀಕರಣದಿಂದ ಸಿಕ್ಕಿದ ರೂ. 5 ಕೋಟಿ ಪರಿಹಾರದಿಂದ ಯಾರಿಗೆ ಪ್ರಯೋಜನ? ಕಂಪೆನಿಯ ವಾರ್ಷಿಕ ದಾಖಲೆಗಳಿಂದ ತಿಳಿದುಬರುವುದೇನೆಂದರೆ, 13510 ಶೇರುಗಳು ಸಂಜಯಗಾಂಧಿ ಹೆಸರಿನಲ್ಲಿದ್ದವು. ಸಂಜಯಗಾಂಧಿಯ ಮಕ್ಕಳಾದ ಪ್ರಿಯಾಂಕಗಾಂಧಿ ಮತ್ತು ರಾಹುಲಗಾಂಧಿ ಇವರ ಹೆಸರಿನಲ್ಲಿ ತಲಾ 4000 ಶೇರುಗಳಿದ್ದವು. ಸಂಜಯಗಾಂಧಿಯ ಅಣ್ಣ ರಾಜೀವಗಾಂಧಿಯ ಇಟೆಲಿಯನ್ ಹೆಂಡತಿ ಸೋನಿಯಾಗಾಂಧಿಯ ಹೆಸರಿನಲ್ಲಿ 2000 ಶೇರುಗಳಿದ್ದವು. ಆದರೆ 1973ರ ವಿದೇಶಿ ವಿನಿಮಯ ನಿಯಂತ್ರಣ ಕಾಯಿದೆಯಂತೆ ಭಾರತದ ನಾಗರಿಕಳಲ್ಲದ ಅವಳ ಶೇರುಗಳನ್ನು ಮರುವಿತರಣೆ ಮಾಡಲಾಯಿತು. ಮಾರುತಿ ಕಂಪೆನಿಯ ಬಳಗಕ್ಕೆ ಸೇರಿದ ಮಾರುತಿ ಟೆಕ್ನಿಕಲ್ ಸರ್ವಿಸಸ್ ಕಂಪೆನಿಯನ್ನು ರಾಷ್ಟ್ರೀಕರಣಗೊಳಿಸಲಿಲ್ಲ. ಈ ಸಂಸ್ಥೆಗೆ ಮಾರುತಿ ಕಂಪೆನಿಯು ತಾಂತ್ರಿಕ ನೆರವು ಪಡೆಯಲು ರೂ. 5 ಲಕ್ಷ ಕೊಡುವ ಮತ್ತು ಮಾರುತಿ ಕಾರು ಮಾರಿದ ಮೊತ್ತದ ಶೇ. 2 ರಷ್ಟು ಕಮಿಶನ್ ಕೊಡುವ ಒಪ್ಪಂದವಾಗಿತ್ತು. ಅದರಂತೆ, 1973ರಲ್ಲಿಯೇ ಸಂಜಯಗಾಂಧಿಗೆ ರೂ. 3 ಲಕ್ಷ ಹಣ ಕೊಡಲಾಗಿತ್ತು. ಮಾರುತಿ ಟೆಕ್ನಿಕಲ್ ಸರ್ವಿಸ್ ಕಂಪೆನಿಯು ರಾಷ್ಟ್ರೀಕರಣವಾಗಿಲ್ಲವಾದುದರಿಂದ, ರಾಷ್ಟ್ರೀಕೃತ ಮಾರುತಿ ಕಂಪೆನಿಯಿಂದ ಸಂಜಯಗಾಂಧಿ-ಇಂದಿರಾಗಾಂಧಿ ಮನೆಯವರೇ ಹೆಚ್ಚಾಗಿ ಶೇರುದಾರರಾಗಿರುವ ಈ ಖಾಸಗಿ ಕಂಪೆನಿಯು ಮುಂದೆಯೂ ಭಾರೀ ಪ್ರಯೋಜನ ಪಡೆಯಬಹುದು.

ಮಾರುತಿ ಕಂಪೆನಿಯ ಬಳಗಕ್ಕೆ ಸೇರಿದ ಇನ್ನೊಂದು ಸಂಸ್ಥೆ ಮಾರುತಿ ಹೆವಿ ವೆಹಿಕಲ್ಸ್ ಕಂಪೆನಿ ಇದನ್ನೂ ರಾಷ್ಟ್ರೀಕರಣ ಮಾಡಲಿಲ್ಲ. ಈ ಕಂಪೆನಿಯೂ ಮಾರುತಿ ಟೆಕ್ನಿಕಲ್ ಸರ್ವಿಸಸ್ ಕಂಪೆನಿಗೆ ರೋಡ್ ರೋಲರ್ಸ್ ಮತ್ತದರ ಬಿಡಿ ಉಪಕರಣಗಳ ಮಾರಾಟ ಮೌಲ್ಯದ ಶೇ. 2 ರಷ್ಟು ಕಮಿಶನ್ ಕೊಡಬೇಕಾಗುವುದು. ಈ ಕಂಪೆನಿಯ ಶೇರುದಾರರು: 1. ಸಂಜಯಗಾಂಧಿ, 2. ರಾಜೀವಗಾಂಧಿ, 3. ಮಾರುತಿ ಟೆಕ್ನಿಕಲ್ ಸರ್ವಿಸಸ್ ಕಂಪೆನಿ, 4, ಮೇನಕಾಗಾಂಧಿ, ಸೋನಿಯಾಗಾಂಧಿಗೆ ಕೊಟ್ಟ ಶೇರುಗಳನ್ನು ನಂತರ ಮರುವಿತರಣೆ ಮಾಡಲಾಯಿತು. ಈ ಕಂಪೆನಿಯೂ ರಾಷ್ಟ್ರೀಕರಣವಾಗದೇ ಇದ್ದುದರಿಂದ, ಮುಂದೆ ರಾಷ್ಟ್ರೀಕೃತ ಮಾರುತಿ ಕಂಪೆನಿಯಿಂದ ಭಾರೀ ಪ್ರಯೋಜನ ಪಡೆಯಲಿರುವುದು.

ಮಾರುತಿ ರಾಷ್ಟ್ರೀಕರಣದಿಂದ ಬಂದ ರೂ. 5 ಕೋಟಿ ಪರಿಹಾರ ಧನವು ಹೆಚ್ಚಾಗಿ ಇಂದಿರಾಗಾಂಧಿ - ಸಂಜಯಗಾಂಧಿ ಕುಟುಂಬಕ್ಕೆ ಸೇರುವುದು. ರಾಷ್ಟ್ರೀಕೃತ ಮಾರುತಿ ಕಂಪೆನಿಯ ವಿಸ್ತೃತ ವ್ಯವಹಾರಗಳ ಅಂತಿಮ ಲಾಭ, ಪ್ರಯೋಜನವು ಇಂದಿರಾಗಾಂಧಿ - ಸಂಜಯಗಾಂಧಿ ಕುಟುಂಬದವರೇ ಹೆಚ್ಚಾಗಿ ಶೇರುದಾರರಾಗಿರುವ ಮತ್ತು ಇನ್ನೂ ರಾಷ್ಟ್ರೀಕರಣವಾಗದೆ ಉಳಿದ ಮಾರುತಿ ಟೆಕ್ನಿಕಲ್ ಸರ್ವಿಸಸ್ ಮತ್ತು ಮಾರುತಿ ಹೆವಿ ವೆಹಿಕಲ್ಸ್ ಕಂಪೆನಿಗಳಿಗೆ ನಿರಂತರವಾಗಿ ಸೇರಲಿರುವುದು. ಹೇಗಿದೆ ಗರೀಬೀ ಹಟಾವೋ ಸಮಾಜವಾದ?

ಮಾರುತಿ ಕಂಪೆನಿ ರಾಷ್ಟ್ರೀಕರಣವು ಇಂದಿರಾಗಾಂಧಿಯು ಸ್ಪಷ್ಟವಾಗಿ ತನ್ನ ಪ್ರಧಾನಿ ಪಟ್ಟವನ್ನು ಸ್ವಜನ ಲಾಭಕ್ಕಾಗಿಯೇ ಮಾಡಿದುದಾಗಿದೆ. ಇದು ಅಧಿಕಾರದ ದುರುಪಯೋಗ, ಹಣದ ದುರುಪಯೋಗ, ಭ್ರಷ್ಟಾಚಾರ. ಈಗಾಗಲೇ ಪತ್ರಿಕೆಗಳಲ್ಲಿ ಎಲ್ಲಾ ಮೂಲಗಳಿಂದ ಮಾರುತಿ ರಾಷ್ಟ್ರೀಕರಣದ ವಿರುದ್ಧ ಪ್ರತಿಕ್ರಿಯೆಗಳು ಬರುತ್ತಿವೆ.

ಇಂದಿರಾ ಸರಕಾರ ಗುತ್ತೇದಾರಿ ಬಂಡವಾಳಶಾಹಿಗಳಿಂದ ನಿಯಂತ್ರಿತವಾದ ಇಡೀ ಮೋಟಾರು ಕೈಗಾರಿಕೆಯನ್ನೂ ಅದಕ್ಕೆ ಸಂಬಂಧಿಸಿದ ಉಕ್ಕು ಕೈಗಾರಿಕಾ ಸಂಸ್ಥೆಗಳನ್ನೂ ರಾಷ್ಟ್ರೀಕರಿಸಲು ತಯಾರಿಲ್ಲ. ಇಡೀ ಮೋಟಾರು ಕೈಗಾರಿಕೆಯನ್ನು ರಾಷ್ಟ್ರೀಕರಿಸಿ, ಆಧುನೀಕರಣಗೊಳಿಸಿ, ರಾಷ್ಟ್ರೀಯ ಆರ್ಥಿಕ ಅಭಿವೃದ್ಧಿಗೆ ಬೇಕಾದ ಸರಕು ಸಾಗಾಟದ ವಾಹನಗಳು (ಲಾರಿ), ಪ್ರಯಾಣಿಕರ ದೊಡ್ಡ ವಾಹನಗಳು (ಬಸ್), ಜೀಪುಗಳು, ಕೃಷಿ - ಕೈಗಾರಿಕೋದ್ಯಮಗಳಿಗೆ ಅತ್ಯಗತ್ಯವಾದ ಇತರ ಮೋಟಾರು ವಾಹನಗಳು ಸಾಕಷ್ಟು ಸಂಖ್ಯೆಯಲ್ಲಿ ತಯಾರಿಸಲು ಮುಂದೆ ಬರುವುದಿಲ್ಲ. ಇಲ್ಲದಕ್ಕಿಂತಲೂ ಕಡಿಮೆ ಆದ್ಯತೆ ಇರುವ ಕಾರು ತಯಾರಿಕೆಯಲ್ಲಿ ಸಾರ್ವಜನಿಕ ಹಣ ತೊಡಗಿಸಿ ಇಂದಿರಾಗಾಂಧಿ ತನ್ನ ಕುಟುಂಬದ ಲಾಭ ದಿಟ್ಟಿಸಲು ಕೈಕೊಂಡ ಮಾರುತಿ ರಾಷ್ಟ್ರೀಕರಣವು, ಸಂಜಯಗಾಂಧಿಯ ಮಾರುತಿ ಪ್ರಕರಣದಷ್ಟೇ ಸಾರ್ವಜನಿಕ ಕಳಂಕವಾಗಿದೆ.

●

ಈ ಅವಧಿಯ ಬೆಲೆಗಳನ್ನು ನಿಗದಿಮಾಡುವಾಗ ಸರ್ಕಾರವು "ರೈತರ ಲಾಬಿ"ಗೆ ಮಣಿದಿದೆ ಎಂಬುದು ಏಕಸ್ವಾಮ್ಯದ ನಿಯಂತ್ರಣದಲ್ಲಿರುವ ಎಲ್ಲ ಪತ್ರಿಕೆಗಳ ಏಕಾಭಿಪ್ರಾಯ.

ವ್ಯವಸಾಯ ಬೆಲೆ ಆಯೋಗವು ಮೊದಲು ಬತ್ತಕ್ಕೆ 95 ರೂ. ಗಳನ್ನು ಇತರ ಧಾನ್ಯಗಳಿಗೂ 95 ರೂ. ಗಳನ್ನು ಶಿಫಾರಸು ಮಾಡಿತ್ತು. ಇದು 1979-80ರಲ್ಲಿದ್ದ ಬೆಲೆಯೇ ಆಗಿತ್ತು. ಸೀಮೆಗೊಬ್ಬರ, ಡೀಸೆಲ್ ಎಣ್ಣೆ ಮುಂತಾದ್ದರ ಬೆಲೆಗಳು ಏರಿದ ಮೇಲೆ ಜೂನ್ 8ರಿಂದ ಅನ್ವಯವಾಗುವ ಹಾಗೆ ಬೆಲೆ ಆಯೋಗವು ಹೊಸ ಬೆಲೆಗಳನ್ನು ಸಲಹೆ ಮಾಡಿತು.

ಸರ್ಕಾರ ನಿಗದಿ ಮಾಡಿರುವ ಬೆಲೆಗಳು :

ವ್ಯವಸಾಯ ಬೆಲೆ ಆಯೋಗ ಹೊಸದಾಗಿ ಶಿಫಾರಸು ಮಾಡಿದ ಬೆಲೆ ಬತ್ತಕ್ಕೆ ಕ್ವಿಂಟಾಲಿಗೆ 100ರೂ., ಇತರ ಧಾನ್ಯಗಳಿಗೆ 97-50ರೂ. ಆದರೆ ಆಯೋಗಕ್ಕಿಂತ ಹೆಚ್ಚು ಬೆಲೆಯನ್ನು ಎಂದರೆ ಬತ್ತಕ್ಕೆ 105ರೂ. ಇತರ ಧಾನ್ಯಗಳಿಗೆ 105ರೂ ಎಂದು ಸರ್ಕಾರ ಘೋಷಿಸಿತು.

ಸರ್ಕಾರವು ಕಡಲೇಕಾಯಿ, ಸೂರ್ಯಕಾಂತಿ ಬೀಜ, ಸೋಯಾ ಅವರೆ, ಇವುಗಳಿಗೂ ಕಳೆದ ವರ್ಷಕ್ಕಿಂತ ಹೆಚ್ಚಿಗೆ ಬೆಲೆಯನ್ನು ನಿಗದಿ ಮಾಡಿದೆ. ಆದರೆ ಕಬ್ಬಿಗೆ ಆಯೋಗ ಸೂಚಿಸಿದ ಬೆಲೆ ಗೊತ್ತಿಲ್ಲ. ತಮಿಳುನಾಡು ಸರ್ಕಾರವು ಹಿಂದೆ ಕ್ವಿಂಟಾಲಿಗೆ 124 ರೂ ಉತ್ಪಾದನಾ ವೆಚ್ಚವು ಆಗುತ್ತದೆ ಎಂದು ಹೇಳಿದ್ದರು. ಆಂಧ್ರ ಪ್ರದೇಶದಲ್ಲಿ 125-46ರೂ ಆಗುತ್ತದಂತೆ. ವ್ಯವಸಾಯ ಬೆಲೆ ಆಯೋಗದ ಸದಸ್ಯರಾದ ಶ್ರೀ ರಣಧೀರ್ ಸಿಂಗ್ ಅವರೇ ಆಯೋಗವು ಉತ್ಪಾದನಾ ವೆಚ್ಚವನ್ನು ಲೆಕ್ಕ ಮಾಡುವ ವಿಧಾನವು ತಪ್ಪು ಎಂದು ಹೇಳಿದ್ದರು.

ಈ ಉತ್ಪಾದನಾ ವೆಚ್ಚದ ಏರಿಕೆ ಮತ್ತು ಅದನ್ನು ರೈತನಿಗೆ ತುಂಬಿಸಿಕೊಡಬೇಕೆನ್ನುವ ಕಾಳಜಿ, ಗುತ್ತೇದಾರಿ ನಿಯಂತ್ರಣದ ಪತ್ರಿಕೆಗಳಿಗೆ ಇಲ್ಲ. ವ್ಯವಸಾಯ ಬೆಲೆ ಆಯೋಗಕ್ಕಿಂತ ಸರ್ಕಾರವು ಹೆಚ್ಚು ಬೆಲೆ ನಿಗದಿ ಮಾಡಿರುವುದರಿಂದ ಹಣದುಬ್ಬರಕ್ಕೆ ದಾರಿಯಾಗುತ್ತದೆ ಎಂದು ಅವು ಟೀಕಿಸಿವೆ.

78ರಲ್ಲಿ ಹೊಲದಲ್ಲೇ ಸುಟ್ಟು ಹಾಕಿದ್ದರು. ಆದರೆ ಸಕ್ಕರೆ ಬೆಲೆ ಏನಾಗಿದೆ? ಬಹಿರಂಗ ಮಾರುಕಟ್ಟೆ ಬೆಲೆಯು 1979ರವರೆಗೆ ಮೂರು ರೂಪಾಯಿ ಮೀರಲಿಲ್ಲ. ಈಗ ಸರ್ಕಾರ ಆರು ರೂಪಾಯಿ ನಿಗದಿ ಮಾಡಿದ್ದರೂ ಸಕ್ಕರೆ ಯಾವ ನಗರದಲ್ಲೂ ಸಿಗುತ್ತಿಲ್ಲ. ಕಾಳಸಂತೆ ಸಕ್ಕರೆ ಬೆಲೆಯು ಹತ್ತು ರೂಪಾಯಿಗೆ ಕೆಲವೊಮ್ಮೆ ಹದಿನೈದಕ್ಕೂ ಹೋಗಿದೆ.

ಸಕ್ಕರೆ ಕೈಗಾರಿಕೆಯಲ್ಲಿ ಏನೇ "ಬಿಕ್ಕಟ್ಟ"ನ್ನು ಹೇಳಿದರೂ ಸಕ್ಕರೆ ಸರದಾರರು ತುಂಬ ಒಳ್ಳೆಯ ಲಾಭದ ದಿನಗಳನ್ನು ನಿರೀಕ್ಷಿಸುತ್ತಿದ್ದಾರೆ. ಈಗಿರುವ ಬೆಲೆಯಲ್ಲಿ ಜನತೆಯನ್ನು ಲೂಟಿ ಮಾಡಲು ಅವರು ಆಶಿಸಿದ್ದಾರೆ. ಸರ್ಕಾರ ನಿಗದಿ ಮಾಡಿರುವ ಬೆಲೆಯನ್ನು ಕಬ್ಬಿಗೆ ಕೊಡದಿದ್ದರೆ ಸಕ್ಕರೆ ಬದಲು ಖಂಡಸಾರಿ ತಯಾರಿಕೆಗೆ ಗಮನಹರಿಯಬಹುದೆಂದು ಅವರು ಹೆದರಿದ್ದಾರೆ. ಖಂಡಸಾರಿಯನ್ನು ತಯಾರಿಸುವ ಕಬ್ಬಿನ ಕ್ರಷರ್‌ಗಳ ಮಾಲೀಕರು ಕ್ವಿಂಟಾಲಿಗೆ 25ರೂ. ಕೊಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಕ್ವಿಂಟಾಲಿಗೆ 13 ರೂ. ನಿಗದಿಮಾಡಿದ್ದರೂ 16 ರೂ. ಕೊಡುವಂತೆ ಪ್ರಧಾನಿಯವರು ಮುಖ್ಯಮಂತ್ರಿಗಳಿಗೆ ಬರೆದಿದ್ದಾರೆ. ಪಂಜಾಬ್ ಸರ್ಕಾರ 13 ರೂ. ಗೆ ಇನ್ನೈದು ರೂಪಾಯಿಗಳ ಬೋನಸ್ ಕೊಡುತ್ತಿದೆ. ಅಂದಮೇಲೆ 13 ರೂ. ಎಂದು ನಿಗದಿಮಾಡುವ ಔಚಿತ್ಯವೇನು?

ಖಂಡಸಾರಿ ತಯಾರಕರು ಹೆಚ್ಚು ಬೆಲೆ ಕೊಡುವಾಗ ರೈತರು ಕಡಿಮೆ ಬೆಲೆಗೇಕೆ ಸಕ್ಕರೆ ಕಾರ್ಖಾನೆಗೆ ಕೊಡಬೇಕು? ಆದರೆ ಕಬ್ಬು ಹೀಗೆ ಬೆಲ್ಲ ಮತ್ತು ಖಂಡಸಾರಿಗೆ ಹೋಗುವುದನ್ನು ತಡೆಯಲು ಹಳೆಯ ಕಬ್ಬು ಕಾಯಿದೆಯನ್ನು ಈಗ ಪುನಃ ಜಾರಿಗೆ ತರಲಾಗುತ್ತಿದೆ. ಇದರ ಪ್ರಕಾರ ಸಕ್ಕರೆ ಕಾರ್ಖಾನೆಯ ಇಪ್ಪತ್ತು ಮೈಲು ಪರಿಧಿಯಲ್ಲಿ ಬೆಲ್ಲ ಅಥವಾ ಖಂಡಸಾರಿ ತಯಾರಿಸಬಹುದು. ಇದರಿಂದ ರೈತರಿಗೆ ಖಂಡಸಾರಿ ತಯಾರಕರಿಂದ ಸಿಗುವ ಹೆಚ್ಚು ಬೆಲೆಯೂ ಇಲ್ಲದಂತಾಗುತ್ತದೆ. ಆದರೆ ಸಕ್ಕರೆ ಸರದಾರರು ಇತ್ತೀಚಿನ ತಿಂಗಳಲ್ಲಿ 1000 ಮಿಲಿಯನ್ ರೂ.ಗಳ ಲಾಭ ಗಳಿಸಿದ್ದಾರಂತೆ.

ಕಚ್ಚಾವಸ್ತುವಿನ ಬೆಲೆ ಮತ್ತು ತಯಾರಾದ ವಸ್ತುವಿನ ಬೆಲೆ ಎರಡರಲ್ಲೂ ಇರುವ ಅಗಾಧ ಅಂತರ ಕಬ್ಬು-ಸಕ್ಕರೆಗೆ ಮಾತ್ರವಲ್ಲ ಹತ್ತಿ-ಬಟ್ಟೆ, ಸೆಣಬು-ಸೆಣಬುವಸ್ತುಗಳು, ರಬ್ಬರ್, ತಂಬಾಕು ಕಡಲೇಕಾಯಿ ಇವುಗಳಿಗೂ ಅನ್ವಯಿಸುತ್ತದೆ.

ಹತ್ತಿ ಮತ್ತು ಬಟ್ಟೆ :

ಹತ್ತಿಯ ಬೆಲೆ 300 ರೂ ಎಂದು ಹೇಳಿದರೆ ರೈತರಿಗೆ ಸಿಗುವುದು ಕ್ವಿಂಟಾಲಿಗೆ 250 ರೂಗಳೇ. ಬಟ್ಟೆಯ ಬೆಲೆ ಬೇಕಾದಷ್ಟು ಏರಿದೆ. ಆದರೆ ಹತ್ತಿಗೆ ಕೊಡುವ ಬೆಲೆ ಹಾಗೇ ಇದೆ. ಸೆಣಬಿಗೆ ಕ್ವಿಂಟಾಲಿಗೆ 160ರೂ. ಎಂದಿದೆ. ಪ. ಬಂಗಾಳದ ಅರ್ಥ ಮಂತ್ರಿಗಳು 250ರೂ. ಕೊಡಿ ಎಂದು ಒತ್ತಾಯಿಸಿದ್ದಾರೆ.

ಸರ್ಕಾರ ಹೀಗೆ ಬೆಲೆಗಳನ್ನು ನಿಗದಿ ಮಾಡಿದ್ದರೂ ಸಣ್ಣ ರೈತರ ಪಾಡು ಹೇಳತೀರದು. ಸಣ್ಣ ರೈತರು ಮಾರುಕಟ್ಟೆಗೆ ಉತ್ಪಾದಿಸುವುದಿಲ್ಲ ಎಂಬ ನಂಬಿಕೆ ಹೇಗೋ ಬೆಳೆದಿದೆ

ಸರ್ಕಾರದ ಏಜೆನ್ಸಿಗಳ ಸೋಲು :

ಸರ್ಕಾರದ ಕೊಳ್ಳುವ ಏಜೆನ್ಸಿಗಳಾದ ಭಾರತ ಆಹಾರ ಕಾರ್ಪೊರೇಷನ್, ಸೆಣಬು ಕಾರ್ಪೊರೇಷನ್ ಹತ್ತಿ ಕಾರ್ಪೊರೇಷನ್ ಮುಂತಾದುವು ಸರಿಯಾದ ಸಮಯದಲ್ಲಿ ಮಾರುಕಟ್ಟೆ ಪ್ರವೇಶಿಸುವುದಿಲ್ಲ. ಅವರ ಹತ್ತಿರ ಪರಿಣಾಮಕಾರಿಯಾಗಿ ಕೆಲಸ ಮಾಡಲು, ಹಣ ಕಾಸೂ ಇಲ್ಲ. ಇದರಿಂದ ಸಣ್ಣ ಬೆಳೆಗಾರರಿಗೆ ದೊಡ್ಡ ವ್ಯಾಪಾರಿಗಳೇ ಗತಿಯಾಗಿ, ವ್ಯಾಪಾರಿಗಳು ಚೆನ್ನಾಗಿ ಹಣ ಮಾಡುತ್ತಾರೆ. ಒಟ್ಟಿನಲ್ಲಿ ರೈತರಿಗೆ ಲಾಭ ತುಂಬ ಕಡಿಮೆ ಎನ್ನುವುದಂತೂ ಸ್ಪಷ್ಟವಾಗುತ್ತದೆ. ಬೇರೆ ವಸ್ತುಗಳ ಬೆಲೆ ಏರುತ್ತಿದೆ. ಹಣದುಬ್ಬರ ಶೇ. 30ರಷ್ಟು ಏರಿದೆ. ಇದು ಕಮ್ಮಿ ಆದರೆ ರೈತರ ಬೆಳೆಗೂ ಕಡಿಮೆ ಬೆಲೆ ಒಪ್ಪಿಕೊಳ್ಳಬಹುದು. ರೈತವರ್ಗ ಸತತವಾಗಿ ದಿವಾಳಿಯಾಗುತ್ತಿದೆ.

ಕೃಷಿ ಉತ್ಪನ್ನ ಮತ್ತು ಕೈಗಾರಿಕಾ ವಸ್ತುಗಳ ಬೆಲೆಯಲ್ಲಿ ಸಮಾನತೆ ತರಲು ಕೇಂದ್ರ ಕೃಷಿಮಂತ್ರಿ ನಿರಾಕರಿಸಿದ್ದಾರೆ. ಕಾಂಗ್ರೆಸ್ಸಿನ 30 ವರ್ಷಗಳ ನೀತಿಗಳು, ಜನತಾ-ಲೋಕದಳಗಳ ನೀತಿಗಳು ಇಂದಿನ ಕಾಂಗ್ರೆಸ ನೀತಿಗಳು ಎಲ್ಲವೂ ದೇಶವನ್ನು ತೀವ್ರ ಆರ್ಥಿಕ ಬಿಕ್ಕಟ್ಟಿನತ್ತ ಕರೆದೊಯ್ದಿವೆ.

ಸಂಘಟಿತ ಕಾರ್ಮಿಕ ವರ್ಗ ಮತ್ತು ಮಧ್ಯಮ ವರ್ಗದ ಉದ್ಯೋಗಿಗಳು ವೇತನ ಏರಿಕೆಗಾಗಿ ಹೋರಾಡುತ್ತಾರೆ. ಆದರೆ ರೈತರು ಅಸಂಘಟಿತರಾಗಿಯೇ ಉಳಿದಿದ್ದಾರೆ. ಸಾಮಾನ್ಯ ರೈತ ಎಲ್ಲರಿಂದಲೂ ವಂಚನೆಗೊಳಗಾಗುತ್ತಾನೆ. ಅನೇಕ ಕೋಟಿ ರೂಪಾಯಿಗಳನ್ನು ನುಂಗಿದ ಹಸಿರು ಕ್ರಾಂತಿ ಮೇಲಿನ ಕೆಲವರಿಗೆ ಒಳಿತು ಮಾಡಿದೆ. ರೈತ ವರ್ಗಕ್ಕೆ ದಿವಾಳಿಯೇ ಗತಿಯಾಗಿದೆ.

ಸರ್ಕಾರದ ಬಂಡವಾಳಶಾಹಿ ಬೆಳವಣಿಗೆಯ ಮಾರ್ಗದಿಂದ ಬೆಲೆಗಳ ಸಮಸ್ಯೆ ನೀಗುವುದು ಸಾಧ್ಯವಿಲ್ಲ.

ರೈತರ ತಲೆಯ ಮೇಲೆ ಬಿಕ್ಕಟ್ಟಿನ ಹೊರೆಗಳು

—ಹರಿಕಿಷನ್ ಸಿಂಗ್ ಸುರ್ಜಿತ್

ಗಿಂತ ಐವತ್ತು ಪೈಸೆಯನ್ನು ಮಾತ್ರ ಹೆಚ್ಚಿಸಿದೆ.

ಕೃಷಿ ಉತ್ಪಾದನಾ ವೆಚ್ಚ ಹೆಚ್ಚಿದ್ದರಿಂದ ಕಳೆದ ವರ್ಷದ ಬೆಲೆಗಳು ಬೆಂಬಲಕರವಾಗಿರಲಿಲ್ಲ ಎಂಬುದನ್ನು ತೋರಿಸುವುದಕ್ಕೆ ಯಾವ ಉದಾಹರಣೆಯನ್ನೂ ಕೊಟ್ಟಿಲ್ಲ ಎಂದು ಇಂಡಿಯನ್ ಎಕ್ಸ್‌ಪ್ರೆಸ್‌ನ ಸಂಪಾದಕೀಯ ಟೀಕಿಸಿದೆ.

ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳ :

ಉತ್ಪಾದನಾ ವೆಚ್ಚದಲ್ಲಿ ಏರಿಕೆಯಾಗಿದೆ ಎಂಬುದು ನಿಜ. ಸೀಮೆಗೊಬ್ಬರದ ಬೆಲೆಯೇ ಬಹಳವಾಗಿ ಏರಿದೆ. ಇದೊಂದರಿಂದಲೇ ಬತ್ತದ ಉತ್ಪಾದನಾ ವೆಚ್ಚ ಕ್ವಿಂಟಾಲಿಗೆ 11-50ರೂ. ಹೆಚ್ಚಾಗಿದೆ. ಇದಲ್ಲದೆ ಡೀಸೆಲ್, ಕೀಟೌಷಧ, ಕಳೆನಾಶಕಗಳ ಬೆಲೆಯೂ ತುಂಬ ಹೆಚ್ಚಾಗಿದೆ. ಹೀಗೆ ಉತ್ಪಾದನಾ ವೆಚ್ಚ ತುಂಬ ಏರಿದ್ದರೂ ಬೆಲೆ ಆಯೋಗ ಕ್ವಿಂಟಾಲಿಗೆ ಐದು ರೂ. ಹೆಚ್ಚಿಸಲು ಶಿಫಾರಸು ಮಾಡಿತ್ತು. ಸರ್ಕಾರ ಅದಕ್ಕೆ ಇನ್ನೈದು ರೂಪಾಯಿ ಸೇರಿಸಿದೆ.

ವ್ಯವಸಾಯ ಬೆಲೆ ಆಯೋಗ ತಾನು ಶಿಫಾರಸು ಮಾಡುವ ಬೆಲೆಗಳನ್ನು ಹೇಗೆ ನಿಗದಿ ಮಾಡುತ್ತದೋ

ರೈತಜನಾಂಗ ತನ್ನ ಕೃಷಿ ಉತ್ಪನ್ನವನ್ನು ಹೆಚ್ಚಿಸುವುದು ಈಗ ಅಪರಾಧವಾಗುತ್ತದೆ. ಹಣದುಬ್ಬರ ಸನ್ನಿವೇಶದಲ್ಲಿ ರೈತನನ್ನು ಕಾಪಾಡುವ ಬದಲು ಅದರ ನೆಪಹೇಳಿ ಅವನಿಗೆ ಕೊರತೆ ಮಾಡಲಾಗುತ್ತಿದೆ. ಕೃಷಿ ಆದಾಯದಲ್ಲಿ ಆಗುವ ಹೆಚ್ಚಳವು ಯಾರಿಗೆ ಸೇರುತ್ತದೆ? ಸಣ್ಣ ಉತ್ಪಾದಕನಿಗಂತೂ ಅಲ್ಲ. ತಯಾರಾದ ಕೈಗಾರಿಕಾ ವಸ್ತುಗಳು ಮತ್ತು ಗುತ್ತೇದಾರಿ ಲಾಭಗಳ ಬಗ್ಗೆ ಪತ್ರಿಕೆಗಳು ಚಕಾರ ವಾದವಾಡುವುದಿಲ್ಲ.

ಕಬ್ಬಿನ ಬೆಲೆ :

ಕಬ್ಬಿನ ಬೆಲೆಯನ್ನು ಐವತ್ತು ಪೈಸೆ ಹೆಚ್ಚಿಸಿರುವುದನ್ನೂ ಪತ್ರಿಕೆಗಳು ಟೀಕಿಸಿವೆ. ಐವತ್ತು ಪೈಸೆಯನ್ನು ಸೇರಿಸಿರುವುದು ತಪ್ಪು. ಚರಣ್ ಸಿಂಗ್ ಕಾಲದಲ್ಲಿ 10ರೂ. ಏರಿಸಿದ್ದನ್ನು ಈಗ ಬೇಜವಾಬ್ದಾರಿಯಾಗಿ 12-50ರೂ.ಗೆ ಏರಿಸಲಾಗಿದೆ. ಇದರಿಂದ ಸಕ್ಕರೆ ಕಾರ್ಖಾನೆಯ ಮೇಲೆ ವಿನಾಶಕರ ಪರಿಣಾಮ ಆಗುತ್ತದೆ ಎಂದೆಲ್ಲಾ ಟೀಕಿಸಿವೆ.

ಬೆಂಬಲ ಬೆಲೆಗಳು ತೀರಾ ಇಳಿದಾಗ ರೈತರು ಕಬ್ಬನ್ನು 1977-

ರೈತರ ಉತ್ಪಾದನಾ ವೆಚ್ಚದ ಬಗ್ಗೆ ಕಾಳಜಿ ಇಲ್ಲದ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಸಕ್ಕರ ಕಾರ್ಖಾನೆಗಳ ಉತ್ಪಾದನಾ ವೆಚ್ಚದ ಬಗ್ಗೆ ತುಂಬ ಕಳಕಳಿ ಇದೆ. ಸರ್ಕಾರದ ಕ್ರಮದಿಂದ ಕೈಗಾರಿಕೆ ನರಳುತ್ತದೆ ಎಂದು ಅದು ಬರೆದಿದೆ.

ಸಕ್ಕರೆ ಸರದಾರರಿಂದ ಲೂಟಿ :

ಸಕ್ಕರೆ ಬೆಲೆ 3 ರೂ. ಇದ್ದಾಗ ಕಬ್ಬಿನ ಬೆಲೆ ಕ್ವಿಂಟಾಲಿಗೆ ಹತ್ತು ರೂ. ಇತ್ತು. ಇತ್ತೀಚೆಗೆ 16 ರೂ. ಆಯಿತು. ಈಗ ಸಕ್ಕರೆ ಬೆಲೆ ಗಗನಕ್ಕೆ ಏರಿದೆ. ಆದರೆ ಕಬ್ಬಿನ ಬೆಳೆಗಾರರಿಗೆ ಬೆಲೆ ಸಿಗುತ್ತಿಲ್ಲ.

ಸಕ್ಕರೆ ಸರದಾರರು ಅತ್ಯುನ್ನತ ಮಟ್ಟದಲ್ಲಿ ಲೂಟಿ ಮುಂದುವರೆಸುತ್ತಿದ್ದಾರೆ. ಕಬ್ಬಿನ ಬೆಲೆ ಅತ್ಯಂತ ಕೆಳಗೆ ಇಡುವುದಕ್ಕೆ ಮತ್ತು ಕಬ್ಬು ಉತ್ಪನ್ನವನ್ನು ಬೆಲೆ ಮತ್ತು ಖಂಡಸಾರಿಗೆ ಹೋಗದಂತೆ ತಡೆಯುವುದಕ್ಕೆ ಅವರು ಯತ್ನ ಮಾಡುತ್ತಿದ್ದಾರೆ,

ಇಂದಿರಾಗಾಂಧಿ ಅಧಿಕಾರಕ್ಕೆ ಬಂದ ಮೇಲೆ ಬೆಲೆ ಇನ್ನಷ್ಟು ಏರಿದೆ. ತನ್ನ ನೀತಿಗಳಿಂದ ಉಂಟಾದ ಬಿಕ್ಕಟ್ಟನ್ನು ಸರ್ಕಾರ ರೈತರ ತಲೆಯ ಮೇಲೆ ಹೊರಿಸುತ್ತಿದೆ. ಆದರೆ ಏಕಸ್ವಾಮ್ಯ ನಿಯಂತ್ರಣದ ಪತ್ರಿಕೆಗಳು ಇದರ ಬಗ್ಗೆ ಮೌನವಾಗಿವೆ.

ಎಲ್ಲ ಬಗೆಯ ದುಡಿಯುವ ಜನರು ಸರ್ಕಾರದಿಂದ ದಿವಾಳಿಯಾಗುತ್ತಿದ್ದಾರೆ. ಒಬ್ಬರ ಹೋರಾಟಗಳನ್ನು ಇನ್ನೊಬ್ಬರು ಬೆಂಬಲಿಸುವುದು ಇವತ್ತಿನ ಅಗತ್ಯವಾಗಿದೆ. ಆರು ಪಕ್ಷಗಳ ಅಧಿವೇಶನವು ಬೆಲೆ ಏರಿಕೆಯನ್ನು ಪರಿಶೀಲಿಸಿ, ಐಕ್ಯತೆ, ಐಕ್ಯ ಕಾರ್ಯಾಚರಣೆ ಇವುಗಳಿಗೆ ಕರೆಕೊಟ್ಟಿದೆ. ರೈತವರ್ಗ ಸಂಪೂರ್ಣವಾಗಿ ನಾಶವಾಗದೆ ಇರಬೇಕಾದರೆ ರೈತ ಸಂಘಟನೆಗಳು ಐಕ್ಯ ಕಾರ್ಯಾಚರಣೆ ನಡೆಸಿ ಸರ್ಕಾರದ ಜನವಿರೋಧಿ ನೀತಿಗಳನ್ನು ವಿರೋಧಿಸಬೇಕಾಗಿದೆ.

o

ಸುಗ್ರೀವಾಜ್ಞೆ ಮತ್ತು ಸಂವಿಧಾನ

"ರಾಷ್ಟ್ರೀಯ ಭದ್ರತೆ ತುರ್ತು ಶಾಸನ" ಮಾನ್ಯ ರಾಷ್ಟ್ರಪತಿಯವರ ಸಹಿ ಪಡೆದುಕೊಂಡು ಹೊರ ಬಂದಿರುವ ಈ ಸುಗ್ರೀವಾಜ್ಞೆ ನವೆಂಬರ್ ತಿಂಗಳಲ್ಲಿ ಆರಂಭಗೊಳ್ಳುವ ಚಳಿಗಾಲದ ಸಂಸತ್ತಿನ ಅಧಿವೇಶನದ ನಂತರ ಶಾಸನವಾಗಿ ಜಾರಿಗೆ ಬರಲಿದೆ.

ಈ ಸುಗ್ರೀವಾಜ್ಞೆ ಅನ್ವಯ ಭಾರತದ ಭದ್ರತೆ ಮತ್ತು ರಕ್ಷಣೆಗೆ ಅಪಾಯವುಂಟುಮಾಡುವ ಅಥವಾ ಸಾರ್ವಜನಿಕ ವ್ಯವಸ್ಥೆಗೆ ಅಡ್ಡಿಯುಂಟುಮಾಡುವ, ಜನರಿಗೆ ಅಗತ್ಯ ಸೇವೆ ಹಾಗೂ ಸರಬರಾಜಿಗೆ ತಡೆಯೊಡ್ಡುವ ಯಾವುದೇ ವ್ಯಕ್ತಿಯನ್ನು ವಿಚಾರಣೆ ಇಲ್ಲದೆ ಸ್ಥಾನಬದ್ಧತೆಯಲ್ಲಿಡುವ ಅಧಿಕಾರವನ್ನು ಈ ಸುಗ್ರೀವಾಜ್ಞೆ ನೀಡುತ್ತದೆ.

ಜಿಲ್ಲಾ ಮ್ಯಾಜಿಸ್ಟ್ರೇಟರು ಹಾಗು ಪೋಲೀಸ್ ಕಮಿಷನರ್ ಅವರು ಮುನ್ನೆಚ್ಚರಿಕೆ ಸ್ಥಾನಬದ್ಧತೆ ಬಗೆಗೆ ತಾವು ಹೊಂದಿರುವ ಅಧಿಕಾರವನ್ನು ಮೂರು ತಿಂಗಳವರೆಗೆ ಚಲಾಯಿಸಬಹುದಾಗಿದ್ದು ಹಾಗೂ ಕಾಲಾನುಕಾಲ ಇದನ್ನೆ ವಿಸ್ತರಿಸಬಹುದಾಗಿದೆ, ವಿಸ್ತರಣೆಯ ಅವಧಿ ಮೂರು ತಿಂಗಳಿಗೆ ಸೀಮಿತವಾಗಿರುತ್ತದೆ ಎಂದೂ ಸಹ ಈ ಆಜ್ಞೆ ತಿಳಿಸುತ್ತದೆ.

ವಿಶ್ವದಲ್ಲೇ ಪ್ರಜಾಪ್ರಭುತ್ವ ಆಡಳಿತ ಪದ್ಧತಿಯನ್ನು ಹಾಗೂ ಬಹು ದೊಡ್ಡ ಸಂವಿಧಾನವನ್ನು ಹೊಂದಿರುವ ರಾಷ್ಟ್ರವೆಂದು ಇತಿಹಾಸದಲ್ಲಿ ನಮ್ಮ ಭಾರತ ಖ್ಯಾತಿ ಪಡೆದಿದೆ, ನಮ್ಮ ಸಂವಿಧಾನದ 22(4) ವಿಧಿ ಪ್ರಕಾರ ಯಾವುದೇ ಒಬ್ಬ ವ್ಯಕ್ತಿಯನ್ನು ಬಂಧಿಸಿದರೂ ಸ್ಥಾನಬದ್ಧತೆಯಲ್ಲಿ ಕೇವಲ ಮೂರು ತಿಂಗಳುಗಳ ಕಾಲ ಮಾತ್ರ ಬಂಧನದಲ್ಲಿ ಇಡಬಹುದು. ಆದರೆ ಅದಕ್ಕೂ ಹೆಚ್ಚು ಕಾಲ ಬಂಧನದಲ್ಲಿಡಲು ಸಾಧ್ಯವಿರುವುದಿಲ್ಲ. ಆದರೆ ಇತ್ತೀಚೆಗೆ ಬಂದ "ರಾಷ್ಟ್ರೀಯ ಭದ್ರತೆ ತುರ್ತು ಶಾಸನ"ದ ಪ್ರಕಾರ ವ್ಯಕ್ತಿಯನ್ನು ಬಂಧಿಸಿದ ನಂತರ ಮೂರು ತಿಂಗಳಿಗೊಮ್ಮೆ ಅವಧಿಯನ್ನು ಹೆಚ್ಚಿಸುತ್ತಾ 12 ತಿಂಗಳುಗಳ ಕಾಲ ಬಂಧನದಲ್ಲಿಡಬಹುದು ಎಂದು ಹೇಳುವ ಈ ಸುಗ್ರೀವಾಜ್ಞೆ, ಜನತಂತ್ರದ ಪದ್ಧತಿಗೂ ಹಾಗೂ ಸಂವಿದಾನ ಪದ್ಧತಿಗೂ ವಿರುದ್ಧವಾಗಿದೆ ಎಂಬುವುದನ್ನು ಗಮನಿಸಬೇಕು.

ದೈನಂದಿನ ವ್ಯವಹಾರದಲ್ಲಿ ಅನುಸರಿಸುವ ಸಾಮಾನ್ಯ ಕಾನೂನು (General Law) ಗಳು ಜಾರಿಯಲ್ಲಿ ಇರುವಾಗ, ಇಂತಹ ಒಂದು ಸುಗ್ರೀವಾಜ್ಞೆ ಅವಶ್ಯಕತೆ ಇತ್ತೆ ಎಂಬುವುದನ್ನು ಜನತೆ ಆಲೋಚಿಸಬೇಕಾಗಿದೆ.

ಮನುಷ್ಯ ನಡೆಸುವ ಅಪರಾಧಗಳು, ಎಂದರೆ ಕೊಲೆ, ಅತ್ಯಾಚಾರ, ದರೋಡೆ, ಅಗತ್ಯ ವಸ್ತುಗಳನ್ನು ಅಕ್ರಮವಾಗಿ ದಸ್ತಾನು ಮಾಡುವುದು, ವಸ್ತುಗಳ ಸರಬರಾಜಿನ ಸಮಯದಲ್ಲಿ ತಡೆ ಒಡ್ಡುವುದು, ಸಾರ್ವಜನಿಕ ವ್ಯವಸ್ಥೆಗೆ ಅಡ್ಡಿಯುಂಟುಮಾಡುವುದು, ರಾಷ್ಟ್ರ ರಕ್ಷಣೆಗೆ ಅಪಾಯವುಂಟುಮಾಡುವದು ಇವೇ ಮೊದಲಾದವು ಎಂದು ಹೇಳಬಹುದು.

ಈ ಮೇಲ್ಕಂಡ ಎಲ್ಲಾ ಅಪರಾಧಗಳು 302, 376, 392ರ ಪ್ರಕರಣಗಳ ಭಾರತ ದಂಡ ಸಂಹಿತೆಯಲ್ಲೂ ಮತ್ತು 3 ಮತ್ತು 4ರ ಪ್ರಕರಣಗಳ ಪ್ರಕಾರ ಅಗತ್ಯಸೇವಾ ವಸ್ತು ಮತ್ತು ಸರಬರಾಜು ಅಧಿನಿಯಮದಲ್ಲೂ, ಶಿಕ್ಷಾರ್ಹವಾದುವೆಂದು, ಶಿಕ್ಷೆಯ ಅವಧಿ, ವಿಧಾನ, ಜುಲ್ಮಾನೆ ಮೊದಲಾದವು ಒಳಗೊಂಡಿರುತ್ತದೆ, ಎಂದಮೇಲೆ ಈ ಸುಗ್ರೀವಾಜ್ಞೆ ತರುವದರ ಉದ್ದೇಶವೇನು ಎಂಬುದನ್ನು ಪರಿಶೀಲಿಸಬೇಕಾದುದು ಪ್ರಜ್ಞಾವಂತರ ಲೇಖಕರ ಮತ್ತು ಪತ್ರಿಕಾಕರ್ತರ ಆದ್ಯಕರ್ತವ್ಯವಾಗಿರುತ್ತದೆ,

ಭಾರತ ದಂಡ ಪ್ರಕ್ರಿಯಾ ಸಂಹಿತೆಯ 57ರ ಪ್ರಕರಣ ಪ್ರಕಾರ ಯಾವುದೇ ವ್ಯಕ್ತಿಯನ್ನು ಬಂಧಿಸಿದರೆ, ಬಂಧನದ ಸಮಯದಿಂದ 24 ತಾಸುಗಳಲ್ಲಿ ಹತ್ತಿರದ ನ್ಯಾಯಾಲಯದಲ್ಲಿ ಬಂಧಿತ ವ್ಯಕ್ತಿಯನ್ನು ಹಾಜರ್‌ಪಡಿಸಬೇಕೆಂದು ಹೇಳುತ್ತದೆ. ನಮ್ಮ ಈ ಸುಗ್ರೀವಾಜ್ಞೆ ವ್ಯಕ್ತಿಯನ್ನು ಬಂಧಿಸಿದ ನಂತರ ಐದು ಅಥವ ಹತ್ತು ದಿನಗಳಲ್ಲಿ ಆ ವ್ಯಕ್ತಿಗೆ ಬಂಧನದ ಕಾರಣವನ್ನು ತಿಳಿಸಬಹುದು ಎಂದು ಈ ಆಜ್ಞೆ ತಿಳಿಸುತ್ತದೆ. ಅಂದರೆ ಯಾವ ಕಾರಣವೂ ತಿಳಿಯದೆ ಬಂಧನಕ್ಕೆ ಒಳಗಾಗುವ ವ್ಯಕ್ತಿ ಆ ಹತ್ತು ದಿವಗಳ ಕಾಲ ಅಕ್ರಮ ಬಂಧನದಲ್ಲಿ ಇರುತ್ತಾನೆ ಎಂದು ಅರ್ಥ ಮಾಡಬಹುದು. ಬಂಧಿತ ವ್ಯಕ್ತಿಗೆ ಕಾರಣ ತಿಳಿಸಿದ ನಂತರ ಮೂರು ತಿಂಗಳ ಕಾಲ ಬಂಧನದಲ್ಲಿಟ್ಟಿದ್ದು ನಂತರ ಅವಧಿ ಹೆಚ್ಚಿಸುತ್ತಾ, 12 ತಿಂಗಳು ಕಾಲ ಬಂಧನದಲ್ಲಿಡಲು ಈ ಆಜ್ಞೆ ಅನ್ವಯ, ಬಂಧನ ಕಾನೂನು ಬದ್ಧವಾಗುತ್ತದೆ.

"ರಾಷ್ಟ್ರಭದ್ರತೆಯ ತುರ್ತುಶಾಸನ" ದಡಿಯಲ್ಲಿ ಬಂಧನಕ್ಕೆ ಒಳಗಾಗುವ ವ್ಯಕ್ತಿಗೆ ಸಂವಿಧಾನದತ್ತವಾದ 19ರ ವಿಧಿಯಲ್ಲಿ ಹೇಳಿರುವ ಮೂಲಭೂತ ಹಕ್ಕುಗಳಾದ ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ್ಯ, ಹಾಗೂ ದೇಶದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಿ ಬರುವ ಸಂಚಾರದ ಸ್ವಾತಂತ್ರ್ಯ, ಮತ್ತು 32ನೆ ವಿಧಿ ಪ್ರಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸುವ ಸ್ವಾತಂತ್ರ್ಯ, ಹಾಗು 226ರ ವಿಧಿ ಪ್ರಕಾರ, ರಾಜ್ಯ ಶ್ರೇಷ್ಠ ನ್ಯಾಯಾಲಯಕ್ಕೆ ಮನವಿ ಸಲ್ಲಿಸುವ ಸ್ವಾತಂತ್ರ್ಯ, ಇಲ್ಲವಾಗುತ್ತದೆ.

ನಮ್ಮ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಈ ಆಜ್ಞೆ ಪ್ರಜಾಪ್ರಭುತ್ವದ ತತ್ವನಿಷ್ಠೆಗೆ ಅನುಸಾರವಾದಿದೆಯೆ ಎಂಬುವುದನ್ನು ಪರಿಶೀಲಿಸಬೇಕಾದದ್ದು ಎಲ್ಲಾ ಪ್ರಜಾತಂತ್ರ ಪ್ರೇಮಿಗಳ ಮತ್ತು ಪ್ರಜ್ಞಾವಂತರ ಕರ್ತವ್ಯವಾಗಿರುತ್ತದೆ,

ಪ್ರಜಾಪ್ರಭುತ್ವ ಪದ್ಧತಿಯನ್ನು ಆಡಳಿತಕ್ಕೆ ಅಳವಡಿಸಿಕೊಂಡಿರುವ ರಾಷ್ಟ್ರದಲ್ಲಿ ರಾಜಕೀಯ ಪಕ್ಷಗಳು ಮಹತ್ವದ ಸ್ಥಾನವನ್ನು ಪಡೆದಿರುತ್ತವೆ, ಒಂದೇ ರಾಜಕೀಯ ತತ್ವ ಅಥವ ಉದ್ದೇಶಗಳನ್ನು ಹೊಂದಿರುವ ವ್ಯಕ್ತಿಗಳು ಒಟ್ಟುಗೂಡಿ ರಾಜಕೀಯ ಪಕ್ಷವನ್ನು ರಚಿಸಿಕೊಂಡಿರುತ್ತಾರೆ, ಈ ಉದ್ದೇಶಗಳ ಈಡೇರಿಕೆಗಾಗಿ ಸಂವಿಧಾನಾತ್ಮಕ ಮಾರ್ಗಗಳನ್ನು ಅನುಸರಿಸುತ್ತಾರೆ,

ಪ್ರಜಾಪ್ರಭುತ್ವದ ಯಶಸ್ಸಿಗೆ ರಾಜಕೀಯ ಪಕ್ಷಗಳು ಅವಶ್ಯಕ. ಈ ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಸ್ಪರ್ಧಿಸುವುದು, ಬಹುಮತಗಳಿಸಿದರೆ ಆಡಳಿತ ನಡೆಸುವುದು, ಚುನಾವಣೆಯಲ್ಲಿ ಬಹುಮತ ಪಡೆಯಲಾಗದೆ ಇದ್ದರೆ, ಆಡಳಿತದ ಲೋಪದೋಷಗಳನ್ನು ಸರ್ಕಾರಕ್ಕೆ ತೋರಿಸಿಕೊಡುವುದು, ಇವೇ ಮುಂತಾದವು ಪ್ರಜಾಪ್ರಭುತ್ವದ ಯಶಸ್ಸಿಗೆ ಸಹಾಯಕವಾಗಿರುತ್ತವೆ.

ಪ್ರಜಾಪ್ರಭುತ್ವ ಪದ್ಧತಿಯನ್ನು ಅಳವಡಿಸಿಕೊಂಡಿರುವ ಯಾವುದೇ ಒಂದು ರಾಷ್ಟ್ರದಲ್ಲಿ, ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಸೋತರೆ, ರಾಜ್ಯದ ಆಡಳಿತದ ಸೂತ್ರವನ್ನು ಕೈಗೆ ತೆಗೆದುಕೊಳ್ಳಲಾಗದೆ ಇದ್ದರೆ, ಅಲ್ಲಿಯ ರಾಜಕೀಯ ಪಕ್ಷಗಳು ವಿರೋಧ ಪಕ್ಷಗಳಾಗಿ ರೂಪ ತಳೆಯುತ್ತವೆ. ವಿರೋಧ ಪಕ್ಷಗಳು ಎಂಬ ಮಾತ್ರಕ್ಕೆ, ಆಡಳಿತ ಪಕ್ಷದ ಆಡಳಿತವನ್ನು ವಿರೋಧಿಸುವುದೆಂದಾಗಲಿ, ಆಡಳಿತ ಪಕ್ಷದೊಂದಿಗೆ ಸಹಕರಿಸುವುದಿಲ್ಲವೆಂದಾಗಲಿ ಅರ್ಥೈಸಬಾರದು.

ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳ ಕರ್ತವ್ಯ ಎಂದರೆ, ಆಡಳಿತ ಪಕ್ಷ ತಪ್ಪುಗಳನ್ನು ಮಾಡಿದಾಗ ತೋರಿಸಿಕೊಡುವುದು, ಹಾಗು ರಚನಾತ್ಮಕ ಕಾರ್ಯಗಳಲ್ಲಿ ಸಹಕರಿಸುವುದು ಆಗಿರುತ್ತದೆ.

ರಾಜಕೀಯದಲ್ಲಿ ವಿರೋಧ ಪಕ್ಷದವರು ಎಂಬ ಮಾತ್ರಕ್ಕೆ ವಿರೋಧ ಪಕ್ಷದವರೆಲ್ಲರೂ, ರಾಷ್ಟ್ರ ವಿರೋಧಿಗಳೆಂದು, ಭಾರತ ಭದ್ರತೆ ಮತ್ತು ರಕ್ಷಣೆಗೆ ಅಪಾಯ ಉಂಟುಮಾಡುವ ಜನರೆಂದು, ಸಾರ್ವಜನಿಕ ವ್ಯವಸ್ಥೆಗೆ ಅಡ್ಡಿಯುಂಟುಮಾಡುವ ಜನರೆಂದು, ಆಡಳಿತ ಪಕ್ಷದವರು ಇಂತಹ ತಪ್ಪು ಕಲ್ಪನೆಗಳನ್ನು ಮಾಡುವುದು ಮೊದಲು ಕೈ ಬಿಡಬೇಕು.

ಪ್ರಜಾಪ್ರಭುತ್ವದ ಆಡಳಿತ ಪದ್ಧತಿಯಲ್ಲಿ "ಆಡಳಿತಾಂಗ" ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಎಂದು ಮೂರು ವಿಭಾಗಗಳಾಗಿ ವಿಭಾಗಗೊಂಡಿದೆ. ಶಾಸಕಾಂಗವು ರಾಷ್ಟ್ರಕ್ಕೆ ಅವಶ್ಯಕವಾದ ಕಾಯ್ದೆಗಳನ್ನು ರಚಿಸಿಕೊಡುತ್ತದೆ. ಕಾರ್ಯಾಂಗವು ಶಾಸಕಾಂಗವು ರಚಿಸಿಕೊಟ್ಟ ಕಾಯ್ದೆಗಳನ್ನು ಕಾರ್ಯಾಚರಣೆಗೆ ತರುತ್ತದೆ ನ್ಯಾಯಾಂಗವು ಕಾಯ್ದೆ ಪ್ರಕಾರ ನಡೆಯದವರನ್ನು ಶಿಕ್ಷಿಸುತ್ತದೆ, ನಾಗರೀಕರ ಹಕ್ಕುಗಳನ್ನು, ಸರ್ಕಾರ ಅಥವ ಇತರ ವ್ಯಕ್ತಿಗಳು, ಸಂಸ್ಥೆಗಳು ಅಪಹರಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ನ್ಯಾಯಾಂಗದ ಮೇಲಿದೆ. ಕಾಯ್ದೆ ಮೂಲಕ ನೀಡಲಾಗಿರುವ ಯಾವುದೇ ಹಕ್ಕಿಗೆ ಚ್ಯುತಿ ಬಂದರೂ, ಅಂತಹ ವ್ಯಕ್ತಿಗಳು, ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು. ಈಗ ನಮ್ಮ ಮುಂದೆ ಇರುವ "ರಾಷ್ಟ್ರೀಯ ಭದ್ರತಾ ತುರ್ತು ಶಾಸನ"ವನ್ನು ಪ್ರಜಾಪ್ರಭುತ್ವ, ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳ ಅರ್ಥವ್ಯಾಪ್ತಿಯಲ್ಲಿ ನೋಡಬೇಕೆಂಬುವುದನ್ನು ಪ್ರಜಾತಂತ್ರ ಪ್ರೇಮಿಗಳು ಅರ್ಥಮಾಡಬೇಕಿದೆ.

ಲೇ : ಬಿ.ಕಾ. ಮೂರ್ತೀಶ್ವರಯ್ಯ

●

ಬಾಗಲಕೋಟೆಯಲ್ಲಿ ಭಾರಿ ಸಭೆ

ಸ್ವಾತಂತ್ರ್ಯಾನಂತರ ದೇಶವನ್ನಾಳಿದಭೂಮಾಲಕ-ಬಂಡವಾಳಶಾಹಿ ಪಕ್ಷಗಳ ಜನವಿರೋಧಿಧೋರಣೆಗಳಿಂದ ಬೇಸತ್ತ ಜನ ಸ್ಥಾಪಿತ ರಾಜಕೀಯ ಪಕ್ಷಗಳ ಮೇಲೆ ಇಟ್ಟಿದ್ದ ನಂಬುಗೆಯನ್ನು ಬಿಡುವಂತಾಗುತ್ತಲಿದೆ. ಜನರ ಪ್ರತಿನಿಧಿಗಳೆನಿಸಿದವರು, ಜನದ್ರೋಹಿಗಳಾಗಿದ್ದಾರೆ. ಜನತೆಯಲ್ಲಿ ರಾಜಕೀಯ ಪ್ರಜ್ಞೆ, ಸಂಘಟನೆ ಮತ್ತು ಹೋರಾಟಗಳು ನಡೆದರೇನೇ ಪರಿಹಾರದ ದಾರಿ ಇದೆ. ರಾಷ್ಟ್ರ ಮಟ್ಟದಲ್ಲೂ, ರಾಜ್ಯದಲ್ಲೂ ಸಿ. ಪಿ. ಐ. (ಎಂ)ನ ಮುತುವರ್ಜಿಯಿಂದ ಸಮಾನ ಅಭಿಪ್ರಾಯಗಳುಳ್ಳ ಪಕ್ಷಗಳು ಒಂದು ಸೇರಿ ತುರ್ತುಸಮಸ್ಯೆಗಳ ಪರಿಹಾರಕ್ಕಾದಿ ಹೋರಾಡಲು ಯೋಜನೆ ಹಾಕಲಾಗಿದೆ. ಬಾಗಲಕೋಟೆಯ ಜನತೆ ಈ ಪ್ರಯತ್ನಕ್ಕೆ ಸಂಪೂರ್ಣ ಬೆಂಬಲವೀಯಬೇಕೆಂದು ಕೇಳಿಕೊಂಡರು ಕಾಂ. ಎಂ.ಕೆ. ಭಟ್. ತಾ. 14-10-80ರಂದು ಸಂಜೆ ಬಿಜಾಪುರ ಜಿಲ್ಲೆಯ ಬಾಗಲಕೋಟೆ ನಗರದ ವಲ್ಲಭಬಾಯಿಚೌಕದಲ್ಲಿ ಸೇರಿದ್ದ ಭಾರೀ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ರೈತರ ಹೋರಾಟವನ್ನು ದಮನ ಮಾಡುತ್ತಿರುವ ಸರಕಾರವನ್ನು ಹೀಯಾಳಿಸಿದರು.

ಬಿಜಾಪುರ ಜಿಲ್ಲೆಯಲ್ಲಿ ಬರಗಾಲದಿಂದಾಗಿ ಸಹಸ್ರಾರು ರೈತರು ಮನೆಮಾರು ಬಿಟ್ಟು ಮಹಾರಾಷ್ಟ್ರ, ಗೋವಾಗಳಿಗೆ ಹೋಗುತ್ತಲಿರುವರು. ರೈತರು ರಾಜ್ಯಾದ್ಯಂತ ಹೋರಾಡುತ್ತಲಿರುವರು. ಹಾಗಿದ್ದರೂ ಸರಕಾರವು ಜನರ ಸಮಸ್ಯೆಗಳ ಪರಿಹಾರ ಮಾಡುವ ಬದಲು, ಅವರನ್ನು ಸಾಯಿಸುತ್ತಿದೆ. ಈ ದುಷ್ಟ ಸರಕಾರ ಮತ್ತು ಭ್ರಷ್ಟ ಅಧಿಕಾರಿಗಳನ್ನು ವಿರೋಧಿಸಿ ಹೋರಾಡಲು ಕರೆ ಇತ್ತರು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ. ಭೀಮಸಿಕಲಾದಗಿಯವರು. ಬೆಲೆ ಏರಿಕೆಯನ್ನು ಕೃತಕವಾಗಿ ನಿರ್ಮಿಸಲು ಕಾಂಗ್ರೆಸ ಸರಕಾರದ ಧೋರಣೆಯೇ ಕಾರಣವೆಂದ ಕಾಂ. ಎನ್. ಕೆ. ಉಪಾಧ್ಯಾಯ ಅವರು, ರಾಜ್ಯಾದ್ಯಂತ ನಡೆಯುವ ಹೋರಾಟದಲ್ಲಿ ಬಾಗಲಕೋಟೆಯ ಜನ ಸಕ್ರಿಯವಾಗಿ ಭಾಗವಹಿಸಲು ಕರೆ ಇತ್ತರು. ಕಾಂ. ಡಿ.ಎಂ. ಖಿಲಾಸಿ ಅವರು ಸ್ವಾಗತ ಭಾಷಣ ಮಾಡುತ್ತಾ, ಸಿ ಪಿ ಐ(ಎಂ).ನ ಕಾರ್ಯಕ್ರಮಗಳಿಗೆ ಬೆಂಬಲಿಸಲು ಜನತೆಯನ್ನು ವಿನಂತಿಸಿದರು. ●

ಹರಿಹರದಲ್ಲಿ ಸಕ್ಕರೆ ಅಭಾವದ ವಿರುದ್ಧ ಪ್ರತಿಭಟನೆ

ಕಳೆದ ಮೂರು ತಿಂಗಳಿಂದ ಪ್ರತಿ ರೇಷನ್ ಕಾರ್ಡಿಗೆ ಕೊಡುತ್ತಿದ್ದ ಪಡಿತರದಲ್ಲಿ ಮಾತ್ರಷ್ಟು ಖೋತಾ ಮಾಡಿ ಕೇವಲ ಅರ್ಧದಷ್ಟು ಮಾತ್ರ ಕೊಡುತ್ತಿರುವುದನ್ನು ಪ್ರತಿಭಟಿಸಿ ತಾ. 17-10-1980ರಂದು ಹರಿಹರ ಕಿರ್ಲೋಸ್ಕರ್ ಕಾರ್ಮಿಕರು ಮೆರವಣಿಗೆ ನಡೆಸಿ, ತಹಸೀಲ್ದಾರರಿಗೆ ಮನವಿ ನೀಡಿದರು. ಜನಸಾಮಾನ್ಯರು ಮುಕ್ತ ಪೇಟೆಯಲ್ಲಿ ಸಕ್ಕರೆ ಕೊಳ್ಳುವುದು ದುಬಾರಿಯಾಗಿರುವಾಗ ಸಕ್ಕರೆ ರೇಷನ್ ಕಡಿತ ಮಾಡಿರುವುದನ್ನು ಕೂಡಲೇ ಸರಿಪಡಿಸಬೇಕೆಂದು ಒತ್ತಾಯಪಡಿಸಿದರು.

ನಂತರ ತಹಸೀಲ್ದಾರರು ಕೂಡಲೇ ಜಿಲ್ಲಾಧಿಕಾರಿಗಳಿಗೆ ಟೆಲಿಫೋನ್ ಮೂಲಕ ಸಂಪರ್ಕಿಸಿ ಪರಿಸ್ಥಿತಿಯನ್ನು ವಿವರಿಸಿದರು. ಮುಕ್ತ ಪೇಟೆಗೆ ಬಿಡುಗಡೆ ಮಾಡುವ ಸಕ್ಕರೆಯನ್ನೇ ಸ್ವಲ್ಪ ಕಾಲದವರೆಗೆ ಸಂಘದ ಸೊಸೈಟಿಗೆ ಕೊಡಲು ಶಿಫಾರಸು ಮಾಡಿದರು.

ಕಾರ್ಮಿಕಸಂಘದ ಪದಾಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ಸಮಾಲೋಚನೆಗೆ ಕರೆದಿದ್ದಾರೆ.

ಪ್ರತಿಭಟನಾ ಮೆರವಣಿಗೆಯ ನೇತೃತ್ವವನ್ನು ಕಾಂ. ಥಾಮ್ಸನ್, ಕಾಂ. ವೀರಾಚಾರ್ ಮತ್ತು ಕಾಂ. ಇಕ್ಬಾಲ್ ಹುಸೇನ್ ವಹಿಸಿದ್ದರು. ○

ಕೇವಲ ಆರ್ಥಿಕ ಹೋರಾಟಗಳಿಂದ ಕಾರ್ಮಿಕ ವರ್ಗವು ವರ್ಗಪ್ರಜ್ಞೆ ಪಡೆಯಲಾರದು

—ಕಾಂ. ಎಸ್. ಸೂರ್ಯನಾರಾಯಣರಾವ್

ಇತ್ತೀಚೆಗೆ ಬಲ್ಗೇರಿಯಾದ ಸೋಫಿಯಾನಲ್ಲಿ ನಡೆದ ಶಾಂತಿಸಮ್ಮೇಳನ ಮತ್ತು ಮಾಸ್ಕೋನಲ್ಲಿ ಜರುಗಿದ ವಿಶ್ವಕಾರ್ಮಿಕ ಸಂಘಗಳ ಮಹಾಧಿವೇಶನ (ಡಬ್ಲ್ಯೂ.ಎಫ್.ಟಿ.ಯು.)ದಲ್ಲಿ ಸಿ. ಐ. ಟಿ. ಯು. ಪ್ರತಿನಿಧಿಯಾಗಿ ಕಾಂ. ಸೂರ್ಯನಾರಾಯಣರಾವ್ ಪಾಲ್ಗೊಂಡಿದ್ದರು. ಡಬ್ಲ್ಯೂ. ಎಫ್. ಟಿ. ಯು.ನ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಕಾಂ. ಸೂರ್ಯನಾರಾಯಣರಾವ್‌ರ ಭಾಷಣದ ಸಂಗ್ರಹಾನುವಾದ.

ದಿನಾಂಕ 1-5-80 ರಂದು ಮಾಸ್ಕೋದಲ್ಲಿ ನಡೆದ ವಿಶ್ವ ಕಾರ್ಮಿಕ ಸಂಘಗಳ ಮಹಾಧಿವೇಶನದಲ್ಲಿ ಅಖಿಲ ಭಾರತ ಸಿ. ಐ. ಟಿ. ಯು. ಪ್ರತಿನಿಧಿಯಾಗಿ ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಭಾಗವಹಿಸಿದ್ದರು. ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ ಕಾಂ. ಸೂರ್ಯನಾರಾಯಣ ರಾಯರು ವಿಶ್ವ ಕಾರ್ಮಿಕ ಸಂಘಗಳ ಅಧಿವೇಶನ (ಡಬ್ಲ್ಯೂ. ಎಫ್. ಟಿ. ಯು.) ದ 35ನೇ ವಾರ್ಷಿಕೋತ್ಸವಕ್ಕೆ ಅಖಿಲ ಭಾರತ ಸಿ. ಐ. ಟಿ. ಯು. ಪರವಾಗಿ ಕ್ರಾಂತಿಕಾರಕ ಅಭಿನಂದನೆಗಳನ್ನು ಸಲ್ಲಿಸಿದರು.

ಕಾಂ. ಸೂರ್ಯನಾರಾಯಣ ರಾವ್ ಮುಂದುವರಿದು ಭಾರತದ ಕಾರ್ಮಿಕ ಚಳುವಳಿಯಲ್ಲಿ ಪ್ರತಿಪಾದಿಸಲಾಗುತ್ತಿದ್ದ ವರ್ಗ ಸಹಕಾರ ಧೋರಣೆಯ ವಿರುದ್ಧವಾಗಿ ವರ್ಗಸಂಘರ್ಷದಲ್ಲಿ ನಂಬಿಕೆಯಿರುವ ಸಿ. ಐ. ಟಿ.ಯು. 1970 ರಲ್ಲಿ ಜನ್ಮತಾಳಿತು. ಐಕ್ಯ ಮತ್ತು ಐಕ್ಯಹೋರಾಟ ಸಿ. ಐ. ಟಿ. ಯು. ವಿನ ಮುಖ್ಯ ಘೋಷಣೆಯಾಗಿ ರೂಪುಗೊಂಡಿತು. ಈ ಒಂದು ದಶಕದ ಅವಧಿಯಲ್ಲಿ ನಮ್ಮ ಸಂಘಟನೆಯ ಶಕ್ತಿ ವರ್ಧಿಸುತ್ತಾ ನಡೆದಿದೆ. ಇಂದು ಎರಡು ಮಿಲಿಯನ್ ಕಾರ್ಮಿಕರು ನಮ್ಮ ಸಂಘಟನೆಯಲ್ಲಿದ್ದಾರೆ. ಇದಲ್ಲದೇ ಲಕ್ಷಾಂತರ ಸರಕಾರಿ ನೌಕರರು (Government Employees) ಮತ್ತು ಮಧ್ಯಮ ವರ್ಗದ ಕೆಲಸಗಾರರ ನಡುವೆ ಸಿ. ಐ. ಟಿ. ಯು. ಪ್ರಭಾವಶಾಲಿಯಾಗಿ ಬೆಳೆಯುತ್ತಿದೆ. ಸಾಮ್ರಾಜ್ಯಶಾಹಿ ರಾಷ್ಟ್ರಗಳ ಸೈನಿಕ-ಒಪ್ಪಂದಗಳನ್ನು ಸಿ. ಐ. ಟಿ. ಯು. ಬಲವಾಗಿ ವಿರೋಧಿಸಿದೆ. ಭಾರತ ಗಣರಾಜ್ಯದ ಸ್ವಾತಂತ್ರ್ಯ ಮತ್ತು ಐಕ್ಯತೆ ಅಮೇರಿಕಿ ಸಾಮ್ರಾಜ್ಯಶಾಹಿ ಬೆದರಿಕೆಯೊಡ್ಡುತ್ತಿದೆ. ಪಾಕಿಸ್ತಾನದ ಮಿಲಿಟರಿ ಆಡಳಿತಕ್ಕೆ ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಿರುವುದಲ್ಲದೇ ಹಿಂದೂ ಮಹಾಸಾಗರದ ಡಿಯೋಗಾರ್ಸಿಯಾದಲ್ಲಿ ತನ್ನ ನೆಲೆಯನ್ನು ಭದ್ರಮಾಡುತ್ತಲಿದೆ. ಭಾರತ ಸರಕಾರ, ಭಾರತದ ವಿವಿಧ ಕಾರ್ಮಿಕ ಸಂಘಟನೆಗಳು ಈ ಬೆಳವಣಿಗೆಗಳನ್ನು ತೀವ್ರವಾಗಿ ವಿರೋಧಿಸಿವೆ,

ಭಾರತ ಸರಕಾರ ತನ್ನ ವರ್ಗ ಧೋರಣೆಯಿಂದಾಗಿ ಸಮಾಜವಾದೀ ರಾಷ್ಟ್ರಗಳೊಂದಿಗೂ, ಬಂಡವಾಳಶಾಹಿ ರಾಷ್ಟ್ರಗಳೊಂದಿಗೂ ಮೈತ್ರಿಯ ಆಟವಾಡುತ್ತಿದೆ. ಹಾಗೂ ದೇಶದಲ್ಲಿ ಬಂಡವಾಳಶಾಹಿ ಸಮಾಜವನ್ನು ಬಲಪಡಿಸುತ್ತಲಿದೆ. ಜಗತ್ತಿನ ಬಂಡವಾಳಶಾಹಿಯ ಮುಗ್ಗಟ್ಟು ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಲಿದೆ. ಬಂಡವಾಳಶಾಹಿ ಮುಗ್ಗಟ್ಟಿನ ಪರಿಣಾಮವಾಗಿ ಹೆಚ್ಚಿದ ಆರ್ಥಿಕ ಬಿಕ್ಕಟ್ಟಿನ ಭಾರವನ್ನು ಭಾರತಸರಕಾರ ತೆರಿಗೆ ಇತ್ಯಾದಿಗಳ ಮೂಲಕ ದುಡಿಯುವ ಜನತೆಯ ಮೇಲೆ ಹೊರಿಸುತ್ತಿದೆ. ಹಣದುಬ್ಬರ ಪ್ರತಿಶತಃ 20 ರಷ್ಟು ಹೆಚ್ಚಿದೆ. ಈ ಕ್ರಮ, ಬೆಲೆಗಳಲ್ಲಿ ಹೆಚ್ಚಳ, ನಿರುದ್ಯೋಗ, ಕಡು ಬಡತನಕ್ಕೆ ದಾರಿಯಾಗಿದೆ. ಪ್ರತಿಶತಃ 70ರಷ್ಟು ಜನತೆ ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ದೇಶದ ರೈತರು-ಕಾರ್ಮಿಕರು, ಸರಕಾರದ ಈ ಜನವಿರೋಧಿ ಧೋರಣೆಯ ವಿರುದ್ಧ ಹೋರಾಡುತ್ತಿದ್ದಾರೆ, ಭಾರತ ಸರಕಾರ ದುಡಿಯುವ ಜನತೆಯ ಹೋರಾಟಗಳನ್ನು ಅಮಾನುಷವಾಗಿ ಹತ್ತಿಕ್ಕುತ್ತಿದೆ."

"ನಮ್ಮ ದೇಶದ ಸರಕಾರಿ ನೌಕರರಿಗೆ ಸಂಘಟನೆ ಹಕ್ಕು ಇಲ್ಲ. ಆದರೆ ಸಿ. ಐ. ಟಿ. ಯು. ಉಪಾಧ್ಯಕ್ಷ ಕಾಂ. ಜ್ಯೋತಿಬಸು ನೇತೃತ್ವದ ಪಶ್ಚಿಮ ಬಂಗಾಳದ ಎಡರಂಗ ಸರಕಾರ ಈ ಹಕ್ಕನ್ನು ಕೊಟ್ಟಿದೆ."

"ಹೆಚ್ಚುತ್ತಿರುವ ಹೋರಾಟಗಳನ್ನು ಸದೆಬಡಿಯಲು ಭಾರತಸರಕಾರ, ಮುಷ್ಕರ ನಿಷೇಧ, ಅಗತ್ಯಸೇವಾ ಮಸೂದೆ ಕಾಯ್ದೆಯ ನೆರವಿನಿಂದ ಪ್ರಯತ್ನಿಸುತ್ತಿದೆ. ಕೆಲವು ರಾಜ್ಯ ಸರಕಾರಗಳು ಜಾರಿಗೆ ತರಲು ಯತ್ನಿಸುತ್ತಿದ್ದರಿಂದ ಸಾರ್ವತ್ರಿಕ ಮುಷ್ಕರಗಳು ನಡೆದಿವೆ."

"ಇಂದುಭಾರತ ಸರಕಾರ ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನ ಮಾಡಿ ಸರ್ವಾಧಿಕಾರಿ ಧೋರಣೆಯ ಕಡೆ ಸಾಗುತ್ತಿದೆ. ಈ ಬೆಳವಣಿಗೆಯನ್ನು ಕಾರ್ಮಿಕರು, ದೇಶದ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ವಿರೋಧಿಸುತ್ತಲಿವೆ."

"ಕಾರ್ಮಿಕ ಚಳುವಳಿ, ದುಡಿಯುವ ಜನತೆಯ ವರ್ಗಸಂಘಟನೆ, ಶೋಷಕವರ್ಗ ತನ್ನ ಶೋಷಣೆಯನ್ನು ಮುಂದುವರಿಸಲು ಕಾರ್ಮಿಕ ವರ್ಗದ ಹಕ್ಕುಗಳನ್ನು ಕಿತ್ತುಕೊಳ್ಳಲು ಯತ್ನಿಸುತ್ತದೆ, ಶ್ರೀಲಂಕಾದ ಶ್ರೀ ಜಯವರ್ಧನೆ ನೇತೃತ್ವದ ಸರಕಾರ ಸುಮಾರು 100,000 ಕಾರ್ಮಿಕರನ್ನು ಕೆಲಸದಿಂದ ವಜಾಮಾಡಿದೆ. ಈ ಘಟನೆ ಜಗತ್ತಿನ ಕಾರ್ಮಿಕ ವರ್ಗಕ್ಕೊಂದು ಸವಾಲಾಗಿದೆ, ಈ ಸವಾಲನ್ನೆದುರಿಸಿ ಶ್ರೀಲಂಕಾ ಸರಕಾರದ ಅಮಾನವೀಯ ಕ್ರಮದ ವಿರುದ್ಧವಾಗಿ ವಿರೋಚಿತವಾಗಿ ಹೋರಾಡಲು ಶ್ರೀಲಂಕಾ ಕಾರ್ಮಿಕರಿಗೆ ಎಲ್ಲ ವಿಧದ ನೆರವು ನೀಡುವುದು ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ, ಈ ದಿಸೆಯಲ್ಲಿ ಮುಂದುವರಿಯುವದು ಡಬ್ಲ್ಯೂ. ಎಫ್. ಟಿ. ಯು. ನ ಕರ್ತವ್ಯವಾಗಿದೆ.

"ತಮ್ಮ ಹಕ್ಕುಗಳಿಗೋಸ್ಕರ ಹೋರಾಡಲು ಅಸಮಾರ್ಥರಾಗಿರುವ ಅಸಂಘಟಿತ ಕೃಷಿಕೂಲಿಗಾರರ ಸಂಘಟನೆಗೆ ನೆರವಾಗುವುದು ಕಾರ್ಮಿಕ ಸಂಘಟನೆಗಳ ಐತಿಹಾಸಿಕ ಜವಾಬ್ದಾರಿಯಾಗಿದೆ."

"ಕೇವಲ ಆರ್ಥಿಕ ಹೋರಾಟಗಳಿಂದ ಕಾರ್ಮಿಕರಲ್ಲಿ ವರ್ಗಪ್ರಜ್ಞೆಯನ್ನು ಬೆಳೆಸಲು ಅಸಾಧ್ಯ, ಕಾರ್ಮಿಕ ಚಳುವಳಿಯು ಈ ಅಂಶವನ್ನು ಮನಗಂಡು ಸಶಕ್ತವಾಗಲು ಡಬ್ಲ್ಯೂ. ಎಫ್. ಟಿ. ಯು ನೆರವಾಗುವುದು ತುಂಬಾ ಅವಶ್ಯವಿದೆ"

"ಅಭಿವೃದ್ಧಿ ಹೊಂದುತ್ತಲಿರುವ ರಾಷ್ಟ್ರಗಳಲ್ಲಿ ಬಹುರಾಷ್ಟ್ರೀಯ ಬಂಡವಾಳಶಾಹಿಗಳ (Multinationals) ಜಾಲ ದೊಡ್ಡದಾಗುತ್ತಿದೆ. ಈ ದೇಶಗಳ ಐಕ್ಯತೆಗೆ ಮಾರಕವಾಗಿರುವ ಬಹುರಾಷ್ಟ್ರೀಯ ಬಂಡವಾಳಶಾಹಿಗಳ ಕುತಂತ್ರಗಳ ವಿರುದ್ಧ ವಿಶ್ವಾದ್ಯಂತ ಸೌಹಾರ್ದತಾ ಕ್ರಮಗಳು ಅವಶ್ಯವಾಗಿದೆ."

"ಮಾರಕಾಸ್ತ್ರಗಳನ್ನು ಕಡಿಮೆ ಮಾಡುವದು ಮತ್ತು ನಿಶಸ್ತ್ರೀಕರಣ"ಕ್ಕಾಗಿ ಬಲ್ಗೇರಿಯಾದ ಸೋಫಿಯಾದಲ್ಲಿ ಸಮಾವೇಶವನ್ನು ಸಂಘಟಿಸಲು ಮಹತ್ತರ ಪಾತ್ರವಹಿಸಿದ್ದಕ್ಕಾಗಿ ಡಬ್ಲ್ಯೂ. ಎಫ್. ಟಿ ಯು. ವನ್ನು ಸಿ. ಐ. ಟಿ. ಯು. ಹಾರ್ದಿಕವಾಗಿ ಅಭಿನಂದಿಸುತ್ತದೆ."

"ಸ್ಥಳೀಯವಾಗಿ, ಪ್ರಾದೇಶಿಕವಾಗಿ, ರಾಷ್ಟ್ರಮಟ್ಟದಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಶಸ್ತ್ರಾಸ್ತ್ರಗಳ ಸ್ಪರ್ಧೆಯ ವಿರುದ್ಧವಾಗಿ ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವದಕ್ಕಾಗಿ ಅಪಾರ ಹಣವನ್ನು ವ್ಯಯಿಸುತ್ತಿರುವದರ ವಿರುದ್ಧವಾಗಿ ಕಾರ್ಯಕ್ರಮಗಳನ್ನು ರೂಪಿಸುವದು ನಮ್ಮೆಲ್ಲರ ಇಂದಿನ ಜವಾಬ್ದಾರಿಯಾಗಿದೆ."

"31ನೇಯ ಡಬ್ಲ್ಯೂ. ಎಫ್. ಟಿ. ಯು. ನ ಈ ಸಮಾವೇಶ ಶಸ್ತ್ರಾಸ್ತ್ರಗಳ ಸ್ಪರ್ಧೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು, ಕ್ರಮಕೈಗೊಳ್ಳುವದೆಂಬ ವಿಶ್ವಾಸ ನಮಗಿದೆ."

"ಜಾಗತಿಕ ಸಮಾಜವಾದಿ ಸಮಾಜವನ್ನು ಪುಡಿಗಟ್ಟಲು ಯತ್ನಿಸುತ್ತಿರುವ ಅಮೇರಿಕದ ಸಾಮ್ರಾಜ್ಯಶಾಹಿಗಳ ವಿಕಿರಣ ಯುದ್ಧ (Nuclear war) ದ ವಿರುದ್ಧ ಹೋರಾಡಲು ಪ್ರತಿಜ್ಞೆಗೈಯ್ಯುವುದು ನಮ್ಮೆಲ್ಲರ ಹೊಣೆಯಾಗಿದೆ."

"ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಐಕ್ಯತೆ ಚಿರಾಯುವಾಗಲಿ."

●

ಯುವಜನ ಸಂಘಟನೆ ಉದ್ಘಾಟನೆ

ದಿನಾಂಕ 1?-10-80ರಂದು ಪುತ್ತೂರ ತಾಲ್ಲೂಕಿನ ಬಜತ್ತೂರ ಗ್ರಾಮದಲ್ಲಿ ಡಿ. ವೈ. ಓ. ಘಟಕದ ಉದ್ಘಾಟನೆಯಾಯಿತು. ಸಭೆಯ ಅಧ್ಯಕ್ಷತೆಯನ್ನು ಬಜತ್ತೂರ ರೈತಸಂಘದ ಅಧ್ಯಕ್ಷ ಕಾಂ. ಅಣ್ಣಯ್ಯಗೌಡ ವಹಿಸಿದ್ದು ಮುಖ್ಯ ಅತಿಥಿಗಳಾಗಿ ದಲಿತಕಾರ್ಮಿಕ ಮುಖಂಡ ಕಾಂ. ಬಿ, ರಾಮಕೃಷ್ಣ ಆಗಮಿಸಿದರು,

ಪ್ರಾರಂಭದಲ್ಲಿ ಕಾಂ. ವಿಲ್‌ಫ್ರೆಡ್ ಸ್ವಾಗತಿಸಿ ಸಂಘಟನೆಯ ವರದಿ ನೀಡಿದರು.

ಕಾಂ, ರಾಮಕೃಷ್ಣ ಉದ್ಘಾಟನಾ ಭಾಷಣ ಮಾಡುತ್ತಾ, ಶೋಷಣೆಯಿಲ್ಲದ ಸಮಾಜ ನಿರ್ಮಿಸುವಲ್ಲಿ ಯುವ ಜನತೆ ಮುಂದೆ ಬರಬೇಕೆಂದು ಕೋರಿದರು. ಯುವಶಕ್ತಿಯನ್ನು ಶೋಷಕ ವರ್ಗ ಉಪಯೋಗಿಸಿಕೊಳ್ಳುತ್ತದೆ ಎಂದು ಹೇಳುತ್ತಾ, ಅಸ್ಸಾಂ ಚಳುವಳಿ, ತ್ರಿಪುರ ಯುವಜನತೆಯ ಉಪಜಾತಿ ಸಮಿತಿಯ ಉದಾಹರಣೆ ನೀಡಿದರು. ಜಾತೀಯತೆ ಮೂಢನಂಬಿಕೆಗಳ ಅಂಧಾನುಕರಣೆ ಬಿಟ್ಟು ವಾಸ್ತವಿಕತೆಯ ಬಗ್ಗೆ ಜಾಗೃತರಾಗಬೇಕೆಂದು ಕೇಳಿಕೊಂಡರು,

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಕಾಂ. ಅಣ್ಣಯ್ಯಗೌಡರು ಮಾತನಾಡುತ್ತಾ ಸಂಘಟನೆಯು ಜನಪರ ಕೆಲಸಗಳನ್ನು ಮಾಡಿ ಯಶಸ್ವಿಯಾಗಲೆಂದು ಹಾರೈಸಿದರು,

ಕೊನೆಗೆ ತಾಲ್ಲೂಕು ಮಟ್ಟದ ಸಂಘಟನೆಯನ್ನು ಕಟ್ಟುವ ಸಲುವಾಗಿ ಕಾಂ, ವಿಲ್‌ಫ್ರೆಡ್ ಡಿಸೋಜ ಸಂಚಾಲಕರಾಗಿರುವ ಸಮಿತಿಯೊಂದನ್ನು ರಚಿಸಲಾಯಿತು,

●

ರೈತರು ಮತ್ತು ರೈತ ಕಾರ್ಮಿಕರ ಸಭೆ

ದಿನಾಂಕ 18-10-80ರಂದು ಚಿಕ್ಕಬಳ್ಳಾಪುರದಲ್ಲಿ ವಿರೋಧ ಪಕ್ಷಗಳ ರೈತರ ಹೋರಾಟ ಸಮಿತಿಯ ಪರವಾಗಿ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಯಿತು, ಮೆರವಣಿಗೆಯ ನೇತೃತ್ವವನ್ನು ಕಾಂ, ಎಸ್. ಲಕ್ಷ್ಮಯ್ಯ, ಕಾಂ. ಪಿ. ಜಗನ್ನಾಥ, ಕಾಂ. ಲಕ್ಷ್ಮಣರೆಡ್ಡಿ, ಪಿ. ವೆಂಕಟಗಿರಿಯಪ್ಪ ಮತ್ತು ಕಾಂ. ದೊರೆಸ್ವಾಮಿ ಮುಂತಾದವರು ವಹಿಸಿದ್ದರು. ಅಸಿಸ್ಟೆಂಟ್ ಕಮೀಷನರ್‌ರ ಆಫೀಸಿಗೆ ತೆರಳಿ ಬೇಡಿಕೆಗಳನ್ನೊಳಗೊಂಡ ಮನವಿಪತ್ರ ಅರ್ಪಿಸಲಾಯಿತು. ನಂತರ ಬಾಲಾಜಿ ಟಾಕೀಸಿನ ಮುಂಭಾಗದಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಂ, ಎಸ್. ಲಕ್ಷ್ಮಯ್ಯನವರು ವಹಿಸಿದ್ದರು,

ಸಭೆಯನ್ನು ಉದ್ದೇಶಿಸಿ ಕಾಂ, ಜಗನ್ನಾಥ ಮತ್ತು ಕೋಲಾರದ ಮಾಜಿ ಶಾಸಕ ಶ್ರೀಯುತ ಪಿ, ವೆಂಕಟಗಿರಿಯಪ್ಪ ಮಾತನಾಡುತ್ತಾ ರೈತರ ಸಮಸ್ಯೆಗಳನ್ನು ವಿವರಿಸುತ್ತಾ ರೈತರ ಬೇಡಿಕೆಗಳು ಈಡೇರದಿದ್ದರೆ ದಿನಾಂಕ 27-10-80ರಿಂದ ಕೋಲಾರ ಜಿಲ್ಲೆಯಾದ್ಯಂತ ನಡೆಯಲಿರುವ ಚಳುವಳಿಯಲ್ಲಿ ಭಾಗವಹಿಸಲು ಕರೆನೀಡಿದರು. ಬಾಗೇಪಲ್ಲಿಯ ಕೃಷ್ಣಮೂರ್ತಿಯವರು ಬಾಗೇಪಲ್ಲಿಯಲ್ಲಿ ನಡೆದ ಪೋಲೀಸ್ ಹತ್ಯಾಕಾಂಡವನ್ನು ಸಭೆಗೆ ವಿವರಿಸಿದರು. ಪ್ರಾರಂಭದಲ್ಲಿ ಕಾಂ, ಲಕ್ಷ್ಮಣರೆಡ್ಡಿ ಸ್ವಾಗತಿಸಿದರು. ಕಾಂ, ಕಾಂತರಾಜು ಅವರು ವಂದಿಸಿದರು,

●

ಚಂದಾ ವಿವರ

ಬಿಡಿಪ್ರತಿ	:	50 ಪೈಸೆ
6 ತಿಂಗಳಿಗೆ	:	13 ರೂ,
ಒಂದು ವರ್ಷಕ್ಕೆ	:	25 ರೂ,

ಕುಂದಾಪುರದಲ್ಲಿ "ಪುರೋಗಾಮಿ ಮಹಿಳಾ ಫೆಡರೇಷನ್" ರಚನೆ

ತಾ. 19-10-1980 ರಂದು ಕುಂದಾಪುರದಲ್ಲಿ ಶ್ರೀಮತಿ ದೇವಕಿ ವಾರಿಯರ್ ಅಧ್ಯಕ್ಷತೆಯಲ್ಲಿ ಮಹಿಳೆಯರ ಸಭೆ ಸೇರಿ "ಪುರೋಗಾಮಿ ಫೆಡರೇಷನ್" ರಚಿಸಲಾಯಿತು. ಶ್ರೀಯುತ ಡಾ|| ಪಿ. ಕೆ. ವಾರಿಯರ್ ಈ ಸಭೆಯಲ್ಲಿ ಉಪಸ್ಥಿತರಿದ್ದರು.

ಕೇರಳದಲ್ಲಿ ಈ ಹಿಂದೆ "ಮಹಿಳಾ ಸಂಘಂ" ಸಕ್ರಿಯ ಕಾರ್ಯಕರ್ತೆಯಾದ ಶ್ರೀಮತಿ ದೇವಕಿ ವಾರಿಯರ್, ಮಹಿಳಾ ಸಂಘಟನೆಯ ಉದ್ದೇಶಗಳ ಬಗ್ಗೆ ಮಾತನಾಡುತ್ತ, "ರಾಷ್ಟ್ರ ಮಟ್ಟದಲ್ಲಿ ಪ್ರಗತಿ ಪರವಾದ ಮಹಿಳಾ ಸಂಘಟನೆಗಳು ಸ್ತ್ರೀ ವಿಮೋಚನೆಗಾಗಿ ಹೋರಾಡುತ್ತಾ ಇವೆ. ಮಹಿಳೆಯರಿಗಾಗಿ ಬೇರೆಯ ಒಂದು ಸಂಘ ಏಕೆ ಬೇಕು ಅಂದರೆ, ಸಮಾಜದ ಒಂದು ನಿರ್ದಿಷ್ಟ ಅಂಗವಾದ ಮಹಿಳೆಯರದೇ ಆದ ಸಮಸ್ಯೆಗಳಿವೆ. ಮಹಿಳೆ ಜಗತ್ತಿನ ಪ್ರಥಮ ಶೋಷಿತೆ. ಆಕೆ ಪುರುಷನಿಗಿಂತ ದುಪ್ಪಟ್ಟು ಹೆಚ್ಚು ಕೆಲಸ ಮಾಡಬೇಕಾಗುತ್ತದೆ. ವಿಶ್ವಸಂಸ್ಥೆಯ ಅಂಕಿ ಅಂಶದ ಪ್ರಕಾರ ಜಗತ್ತಿನ ಒಟ್ಟು ಕೆಲಸ ಕಾರ್ಯಗಳಲ್ಲಿ $\frac{2}{3}$ ಭಾಗವು ಮಹಿಳೆಯದ್ದಾಗಿರುತ್ತದೆ. ಆದರೆ ಆದಕ್ಕೆ ದೊರೆಯುವ ಪ್ರತಿಫಲ ಮಾತ್ರ ಒಟ್ಟು ಪ್ರತಿಫಲಗಳ $\frac{1}{10}$ ಭಾಗವಾಗಿದೆ."

ಸಮಾಜದಲ್ಲಿ ಪರೌಲ್ಯ ವ್ಯಾಧಿಯಾಗಿರುವ ಮೂಢನಂಬಿಕೆ, ಅನಕ್ಷರತೆ, ವರದಕ್ಷಿಣಾ ಪದ್ಧತಿ, ಅತ್ಯಾಚಾರಗಳು, ನಿರುದ್ಯೋಗ ಸಮಸ್ಯೆ ಮುಂತಾದವುಗಳು ಅತ್ಯಧಿಕ ಪ್ರಮಾಣವಾಗಿ ಸ್ತ್ರೀಯರನ್ನು ಕಾಡುತ್ತಿವೆ. ಇವುಗಳು ಇಂದಿನ ಕ್ರೂರ ವ್ಯವಸ್ಥೆಯ ಕುರುಹುಗಳಾಗಿರುವುದರಿಂದ, ಈ ವ್ಯವಸ್ಥೆಯನ್ನು ಮಟ್ಟಹಾಕುವುದರಿಂದ ಮತ್ತು ಹೊಸ ವ್ಯವಸ್ಥೆಯನ್ನು ಹುಟ್ಟುಹಾಕುವುದರಿಂದ ಈ ಮೇಲಿನ ಎಲ್ಲಾ ಸಮಸ್ಯೆಗಳು ತೊಲಗುವವು. ಆದುದರಿಂದ ಮಹಿಳಾ ಸಂಘಟನೆ ಕೂಡ ಇತರ ಭ್ರಾತೃ ಸಂಸ್ಥೆಗಳೊಡನೆ ಕೂಡಿಕೊಂಡು ಇಂದಿನ ವ್ಯವಸ್ಥೆಯ ವಿರುದ್ಧ ಹೋರಾಡುವುದು ಸೂಕ್ತ." ಎಂದು ಆಕೆ ತಮ್ಮ ಪ್ರಾಸ್ತಾವಿಕ ಭಾಷಣವನ್ನು ಮುಗಿಸಿದರು.

ಡಾ|| ಎ. ಕೆ. ಆರ್ ವಾರಿಯರ್, ಇಂದಿನ ಸಮಾಜದಲ್ಲಿ ಹೆಣ್ಣು ಗಂಡಿಗಿಂತ ಕೀಳು ಏಕೆ? ಎನ್ನುವ ಪ್ರಶ್ನೆಯನ್ನು ಸಭೆಯ ಮುಂದಿಟ್ಟು, ಆದಿಮಾನವನ ಕಾಲದಿಂದ ಇಂದಿನವರೆಗಿನ ಹೆಣ್ಣು ಮತ್ತು ಗಂಡಿನ ಚರಿತ್ರೆಯನ್ನು ವಿವರಿಸಿ ಹೇಳಿದರು. "ಮನುಷ್ಯ ಕಿರಾತಾವಸ್ಥೆಯಲ್ಲಿರುವಾಗ ಮಾತೃಪ್ರಧಾನ ಕುಟುಂಬವಿದ್ದಿತು. ಹೆಚ್ಚಿನ ಜವಾಬ್ದಾರಿಯುತನಾಗಿರದೆ ಇದ್ದುದರಿಂದ ಆತ ಉತ್ಪಾದನೆಯಲ್ಲಿ ಹೆಚ್ಚಿನ ಆಸಕ್ತಿ ಉಳ್ಳವನಾಗಿರಲಿಲ್ಲ. ಆದ್ದರಿಂದ ಕಾಲಕ್ರಮೇಣ ಸಮಾಜದ ಉತ್ಪಾದನೆ ಕುಂಠಿತವಾಯಿತು. ಮಕ್ಕಳು ತಾಯಿಯಿಂದಲೇ ನಿರ್ಧರಿಸಲ್ಪಡುವುದರಿಂದ ಆ ಮಕ್ಕಳ ಜವಾಬ್ದಾರಿಯು ತಂದೆಯ ಮೇಲೆ ಇರುತ್ತಿರಲಿಲ್ಲ. (Matriarch is a matter of fact and the patriarch is a matter of complication) ಉತ್ಪಾದನೆಯನ್ನು ಜಾಸ್ತಿ ಮಾಡಬೇಕಾದ ಅವಶ್ಯಕತೆ ಆಗಿನ ಜರೂರು ಹೊಣೆಯಾದ್ದರಿಂದ ಗಂಡು ಕುಟುಂಬದ ಮೇಲೆ ಜವಾಬ್ದಾರಿಯನ್ನು ಹೊಂದಬೇಕಾಗಿತ್ತು. ಆದ್ದರಿಂದ ನಿರ್ದಿಷ್ಟವಾದ ಗಂಡೆ ಮಗುವಿನ ತಂದೆಯೆಂದು ನಿರ್ಧರಿಸಬೇಕಾದರೆ, ಹೆಣ್ಣು, ಗಂಡು ನಿರ್ದಿಷ್ಟಪಡಿಸಿದಂತೆ ಸಮಾಜದಲ್ಲಿ ಸ್ವಚ್ಛಂದವಾಗಿ ಇರುವ ಬದಲು ಇತರರ ಸಂಪರ್ಕದಿಂದ ಬೇರ್ಪಟ್ಟು ಇರಬೇಕಾದಂತಹ ವ್ಯವಸ್ಥೆಯಿರುವ ಸಮಾಜಕ್ಕೆ ತಿರುವು ಪಡೆಯಲು ಕಾರಣವಾಯಿತು. ಅಂದಿನಿಂದ ಸ್ತ್ರೀಯು ಗಂಡಿನ ಅಂಕಿತದಲ್ಲಿ ಇರಬೇಕಾಯಿತು." ಇವಿಷ್ಟನ್ನು ಡಾ|| ವಾರಿಯರ್, ಸ್ತ್ರೀಯು ಅಬಲೆಯಾಗಿ ಹೇಗೆ ಪರಿವರ್ತನೆಯಾದಳು ಎನ್ನುವ ಬಗ್ಗೆ ಚಾರಿತ್ರಿಕವಾಗಿ ವಿವರಿಸಿ, "ಉತ್ಪಾದನಾ ವ್ಯವಸ್ಥೆಗೂ ಸಮಾಜದ ಬದಲಾವಣೆಗೂ ಸಂಬಂಧವಿದೆ. ಗುಲಾಮಿ ವ್ಯವಸ್ಥೆಯ ಹಾಗೆ ಇಂದಿನ ಅರೆ ಪಾಳೆಯಗಾರಿ ಮತ್ತು ಬಂಡವಾಳಶಾಹಿ ಸಮಾಜದಲ್ಲಿ ಸ್ತ್ರೀ ಅತ್ಯಂತ ಶೋಷಿತೆಯಾಗಿದ್ದಾಳೆ. ಇಂಡಿಯಾದಲ್ಲಿ ಸ್ತ್ರೀ ವಿಮೋಚನೆಯಾಗಬೇಕಾದರೆ ಈ ವ್ಯವಸ್ಥೆಯನ್ನು ಯನ್ನು ಬದಲಾಯಿಸಬೇಕು. ಆದ್ದರಿಂದ ಮಹಿಳಾ ಫೆಡರೇಷನ್ ಪ್ರಸ್ತುತ ಅರೆ ಪಾಳೆಯಗಾರಿ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡುವ ಭ್ರಾತೃ ಸಂಘಟನೆಗಳಾದ ವಿದ್ಯಾರ್ಥಿ ಫೆಡರೇಷನ (ಎಸ್. ಎಫ್. ಐ.), ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿ. ವೈ. ಓ.) ಮುಂತಾದ ಪುರೋಗಾಮಿ ಸಂಘಟನೆಗಳ ಜೊತೆ ಕೂಡಿ ಹೋರಾಡಬೇಕು" ಎಂದರು.

ಕೊನೆಗೆ ಕುಮಾರಿ ವಸಂತಿಯವರು ಸಂಚಾಲಕಿಯಾಗಿರುವ 7 ಜನರ ಕಮಿಟಿಯೊಂದನ್ನು ಆಯ್ಕೆ ಮಾಡಲಾಯಿತು.

●

ಪ್ರತಿಭಟನೆ

ದಿನಾಂಕ 28-10-80 ರಂದು ಜರುಗಿದ ಪ್ರಸನ್ನ ರೇಣುಕವೀರ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳ ಅಡ್ಡ ಪಲ್ಲಕ್ಕಿ ಮಹೋತ್ಸವವನ್ನು ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ ಹಾಗೂ ದಲಿತ ಸಂಘರ್ಷ ಸಮಿತಿ ಪ್ರತಿಭಟಿಸಿದವು. ಶ್ರೀಯುತ ರಾಜ್‌ಶೇಖರ ನೇತೃತ್ವದಲ್ಲಿ ಪ್ರತಿಭಟನಾ ಕರಪತ್ರಗಳನ್ನು ಮೆರವಣಿಗೆಯಲ್ಲಿ ಹಂಚಿ ಜನರ ಗಮನವನ್ನು ಸೆಳೆಯಲಾಯಿತು. ಈ ಸಂದರ್ಭದಲ್ಲಿ ಉತ್ಸವ ಸಮಿತಿಯ ಸದಸ್ಯರು ಬಂಡಾಯ ಮತ್ತು ದಲಿತ ಸಂಘರ್ಷ ಸಮಿತಿಗಳ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿ ಕರಪತ್ರಗಳನ್ನು ಕಿತ್ತುಕೊಂಡು ಹರಿದು ಹಾಕಿದ್ದನ್ನು ಪ್ರತಿಭಟಿಸಲಾಯಿತು.

ಅಂಧನಂಬಿಕೆಗಳ ವಿರುದ್ಧ ಪ್ರತಿಭಟಿಸಲು ಸ್ವಾತಂತ್ರವಿದೆಯೆಂದು ಜಂಭಕೊಚ್ಚಿಕೊಳ್ಳುವ ಈ ನಾಡಿನಲ್ಲಿ ಜಾತೀವಾದಿಗಳು ಮತಾದೀಶರುಗಳು ತಮ್ಮ ವಿರುದ್ಧ ಬರುವ ಒಂದು ಸಣ್ಣ ಪ್ರತಿಭಟನೆಯನ್ನೂ ಸಹಿಸದೆ ಯಾವ ರೀತಿ ವರ್ತಿಸುತ್ತಾರೆ ಎಂಬುದನ್ನು ಈ ಘಟನೆ ತೋರಿಸುತ್ತದೆ.

ಇಂತಹ ಪ್ರಯತ್ನಗಳು ಯುವಜನರ ಜಾಗೃತಿಗೆ ಸ್ಫೂರ್ತಿನೀಡಲಿ.

●

ಬೆಳ್ತಂಗಡಿ ತಾಲ್ಲೂಕಿನಾದ್ಯಂತ ರೈತ ಚಳುವಳಿಗೆ ಸಿದ್ಧತೆ

ಬೆಳ್ತಂಗಡಿ ತಾಲ್ಲೂಕು ರೈತ ಸಂಘದ ತಾಲ್ಲೂಕು ಸಮಿತಿಯ ಸಭೆಯು ಉಜಿರೆಯಲ್ಲಿ ಕಾಮ್ರೇಡ್ ಪಿ. ಪಿ. ಮಥ್ಯಾಯುವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಂ. ಬಿ. ವಿಷ್ಣುಮೂರ್ತಿ ಸ್ವಾಗತಿಸಿದರು. ಕಾರ್ಯದರ್ಶಿ ಯುಳು ಚಿತ್ತಾಯರು ತಾಲ್ಲೂಕಿನಲ್ಲಿ ಕಳೆದ ಎರಡು ತಿಂಗಳುಗಳಲ್ಲಿ ನಡೆದ ಚಳವಳಿಗಳ ಕುರಿತು ವಿವರಿಸುತ್ತಾ ಮುಂದಿನ ತಿಂಗಳಿನಾದ್ಯಂತ ರೈತ ಚಳುವಳಿಯನ್ನು ನಡೆಸುವ ಕುರಿತು ಚರ್ಚೆಯನ್ನು ಸಭೆಯ ಮುಂದಿಟ್ಟರು. ತಾರೀಕು 2-11-80 ರಿಂದ ತಾರೀಕು 15-11-80ರವರೆಗೆ ತಾಲ್ಲೂಕಿನ ಗ್ರಾಮಗಳಲ್ಲಿ ರೈತರ ಪ್ರಚಾರ ಜಾಥಾಗಳು ಮನೆಮನೆಗೆ ಹೋರಾಟದ ಸಂದೇಶಗಳನ್ನೊಯ್ಯುವುದು ತಾ 20-11-80 ರಂದು ತಾಲ್ಲೂಕು ಕೇಂದ್ರದಲ್ಲಿ ರೈತರ ಸಾಂಕೇತಿಕ ಅನ್ನಸತ್ಯಾಗ್ರಹ ನಡೆಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ರೈತರ ಸಾಲಗಳ ನಿವೃತ್ತಿ, ಕುಮಕಿ ಭೂಮಿಗಳ ನೀಡಿಕೆ, ರೈತರ ಉತ್ಪನ್ನಗಳಿಗೆ ಸರಕಾರದ ಪ್ರೋತ್ಸಾಹಕ ಬೆಲೆ, ಪಿಂಚಣಿ, ಕೃಷಿಕೂಲಿಗಳಿಗೆ ಪರಿಷ್ಕೃತ ಕೂಲಿ ಮತ್ತು ಇತರ ಸೌಲಭ್ಯಗಳು, ದರಖಾಸ್ತು ಭೂಮಿಗಳ ಶೀಘ್ರ ವಿತರಣೆ, ನಿತ್ಯೋಪಯೋಗಿವಸ್ತುಗಳ ಬೆಲೆ ಹತೋಟಿ ಮೊದಲಾದ ಬೇಡಿಕೆಗಳನ್ನು ಸರಕಾರ ಪೂರೈಸದೆ ಹೋದಲ್ಲಿ ಮುಂದಿನ ತಿಂಗಳುಗಳಲ್ಲಿ ತಾಲ್ಲೂಕು ಕಚೇರಿಯ ಪಿಕೆಟಿಂಗ್, ಬೃಹತ್ ಮತ ಪ್ರದರ್ಶನ, ರೈತ ಸಮ್ಮೇಳನ, ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನೆಗಳನ್ನು ನಡೆಸಲು ಸಮಿತಿಯು ನಿರ್ಣಯಗಳನ್ನು ಕೈಕೊಂಡು ಕರೆ ನೀಡಿತು. ಸಭೆಯಲ್ಲಿ ಕಾಮ್ರೇಡರಾದ ವಿಲ್‌ಫ್ರೆಡ್‌ಪೇರೇರಾ ಲಕ್ಷ್ಮಣ ಮಾಂಗಾಳ್, ಜೋಸೆಫ್, ಪಾಪಚ್ಚನ್ ಮೊದಲಾದವರು ಮಾತಾಡಿದರು. ಅಧ್ಯಕ್ಷರು ಸಂಘಟನೆಯನ್ನು ಬಲಗೊಳಿಸಿ ಹೋರಾಟವನ್ನು ಮುಂದುವರಿಸುವ ಸೂಕ್ತ ನಿರ್ದೇಶನಗಳನ್ನು ನೀಡಿದರು.

○

ಧಾರವಾಡದಲ್ಲಿ ಪ್ರಗತಿಪರ ಮಹಿಳಾ ಸಂಘದ ಉದ್ಘಾಟನೆ

ದಿನಾಂಕ 5-10-80ರಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ "ಪ್ರಗತಿಪರ ಮಹಿಳಾ ಸಂಘದ ಉದ್ಘಾಟನೆಯಾಯಿತು. ಸಂಘವನ್ನು ಉದ್ಘಾಟಿಸುತ್ತಾ" ಮಹಿಳೆಯರು ವ್ಯಯಕ್ತಿಕವಾಗಿ ತಾವೆಷ್ಟೇ ಬೆಳೆದರೂ ಸಹ ಆ ಮಟ್ಟಿಗೆ ಇಡೀ ಸಮಾಜದ ಪ್ರಜ್ಞೆ ಬೆಳೆಯದೇ ಹೋದರೆ ಅಷ್ಟರ ಮಟ್ಟಿಗೆ ಅವರು ಸೋತಂತೆಯೇ ಸರಿ" ಎಂದು ಹೇಳಿದ ಕೆ. ಶರೀಫಾರವರು ಮಹಿಳಾ ಸಮಸ್ಯೆಗಳಾದ ಮಾನಭಂಗ, ಪೋಲಿಸ್ ದೌರ್ಜನ್ಯ, ವರದಕ್ಷಿಣೆ ಪದ್ಧತಿಹಾಗೂ ಇವೆಲ್ಲವುಗಳ ನಿವಾರಣೆಗಾಗಿ ಮಹಿಳೆಯರು ಸಂಘಟಿತರಾಗುವ ಅವಶ್ಯಕತೆಯನ್ನು ಅವರು ಮತ್ತೆ ಮತ್ತೆ ಒತ್ತಿ ಹೇಳಿದರು. ಜೊತೆಗೆ ಈ ಸಂಘಟನೆ ಪುರುಷವಿರೋಧಿ ಸಂಘಟನೆಯಂತೂ ಖಂಡಿತ ಅಲ್ಲ. ಅದು ಸ್ತ್ರೀ ಪುರುಷರಿಬ್ಬರನ್ನು ಶೋಷಿಸುವ ಇಡೀ ವ್ಯವಸ್ಥೆಯ ವಿರುದ್ಧ ಹೋರಾಡುತ್ತದೆ, ಎಂದರು.

ನಂತರ ಮಾತನಾಡಿದ ಮೀರಾ ಹಳಕಟ್ಟಿಯವರು ದುಡಿಯುವ ಮಹಿಳೆಯರ ಸಮಸ್ಯೆಗಳನ್ನು ವಿಶ್ಲೇಷಿಸುತ್ತಾ "ದುಡಿಯುವ ಇಡೀ ಜನಾಂಗದ ಶೇಕಡಾ 28 ರಷ್ಟು ಮಹಿಳೆಯರಿದ್ದಾರೆ ಅವರಿಗೆ ದಾದಿ ವ್ಯವಸ್ಥೆ, ಹೆರಿಗೆ ಭತ್ಯ, ಹೆರಿಗೆ ರಜೆ, ವಿಶ್ರಾಂತಿಗೃಹ, ಶೌಚಾಲಯ ಹಾಗೂ ಇನ್ನಿತರ ಸೌಕರ್ಯಗಳನ್ನು ಒದಗಿಸ ಬೇಕೆಂದು ಹೇಳಿದರು.

ಸುವರ್ಣಾ ಹಿರೇಮಠ ಮತ್ತು ಹೊಸಪೇಟೆಯ ಸಂಘದಸಂಚಾಲಕಿ ಯಶೋದರಮ್ಮನವರು ಮಾತನಾಡುತ್ತಾ "ಸ್ತ್ರೀಯರಲ್ಲಿ ವೈಚಾರಿಕತೆಯನ್ನು ಬೆಳೆಸಲು ಸಹಾಯಕವಾಗುವಂತಹ ಇಂತಹ ಸಂಘಟನೆಗಳ ಅಗತ್ಯತೆಯನ್ನು ತಿಳಿಸಿದರು.

ಕೊನೆಗೆ ತಾತ್ಕಾಲಿಕ ಸಮಿತಿಯ ಸಂಚಾಲಕರಾಗಿ ಲೀಲಾ ಹಾಗರಗಿ ಮತ್ತು ಮೀರಾ ಹಳಕಟ್ಟಿಯವರನ್ನು ಚುನಾಯಿಸಲಾಯಿತು.

●

ರಾಯಚೂರಿನಲ್ಲಿ ಪ್ರಗತಿಪರ ಮಹಿಳಾ ಸಂಘದ ಸಭೆ

ದಿನಾಂಕ 4-10-80ರಂದು ಪ್ರಗತಿಪರ ಮಹಿಳಾ ಸಂಘದ ಆಶ್ರಯದಲ್ಲಿ ರಾಯಚೂರಿನ ಮಹಿಳಾ ಕಾಲೇಜಿನಲ್ಲಿ, "ಸಮಾಜದಲ್ಲಿ ಮಹಿಳೆಯ ಸ್ಥಾನಮಾನ" ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀಮತಿ ಮಂದಾಕಿನಿಬಾಯಿಯವರು "ವಿದ್ಯಾರ್ಥಿನಿಯರೆಲ್ಲಾ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿ ವರದಕ್ಷಿಣೆ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧವಾಗಿ ಹೋರಾಡಲು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಶ್ಯಾಮಲಾ ಅವರು ತಮ್ಮ ಸುದೀರ್ಘ ಭಾಷಣದಲ್ಲಿ ಸ್ತ್ರೀ ಪುರುಷರಲ್ಲಿರುವ ಅಸಮಾನತೆಗೆ ಕಾರಣವಾಗಿರುವ ಆರ್ಥಿಕ, ಸಾಮಾಜಿಕ ಹಿನ್ನೆಲೆಗಳನ್ನು ವಿವರಿಸುತ್ತಾ ಅನ್ಯಾಯ ಅಸಮಾನತೆಗಳಲ್ಲಿ ಹೊಸ ಸಮಾಜದ ಸೃಷ್ಟಿಗಾಗಿ ಪ್ರಯತ್ನಿಸುವುದೇ ಪ್ರಗತಿಪರ ಮಹಿಳಾ ಸಂಘದ ಉದ್ದೇಶ ಎಂದರು.

ಸುಮಾರು 250 ವಿದ್ಯಾರ್ಥಿನಿಯರು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯ ಆರಂಭದಲ್ಲಿ ಕುಮಾರಿ ಸುಲೋಚನಾ ಇವರು ಸ್ವಾಗತಿಸಿದರು. ಶ್ರೀಮತಿ ಮಂಜುಳಾ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದ ಅಂಗವಾಗಿ ಪುಸ್ತಕ ಪ್ರದರ್ಶನ ಹಾಗೂ ಮಾರಾಟ ಏರ್ಪಡಿಸಲಾಗಿತ್ತು.

●

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾಗಿ ಹೋರಾಡಬೇಕು

[ಒಂದನೇ ಪುಟದಿಂದ]

ಬಂಗಾಳ ಮತ್ತು ತ್ರಿಪುರಾದಲ್ಲಿ ನಮ್ಮ ಪಾರ್ಟಿಯ ಸಿ. ಐ. ಟಿ. ಯು. ವಿನ ಮತ್ತು ರೈತ ಸಂಘಗಳ ಕಾರ್ಯಕರ್ತರುಗಳ ಮೇಲೆ ನಿರಂತರ ಧಾಳಿ ನಡೆಸಿ ಕೊಲೆ ಮಾಡಲಾಗುತ್ತಿದೆ. ಕೇರಳದಲ್ಲಿ ಇಂದಿರಾ ಕಾಂಗ್ರೆಸ್ ಕೋಮುವಾದಿ ಶಕ್ತಿಗಳೊಂದಿಗೆ ಕೈ ಜೋಡಿಸಿ, ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸರಕಾರವನ್ನು ವಿರೋಧಿಸುತ್ತಿದೆ. ಇದನ್ನು ದುಡಿಯುವ ಜನತೆ ಒಂದಾಗಿ ಇದಿರಿಸಲು ಮುಂದಾಗಬೇಕು" ಎಂದರು.

ಸಿ. ಐ. ಟಿ ಯು. ವಿನ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಸಿ. ನಂಜುಂಡಪ್ಪನವರು ಮಾತನಾಡುತ್ತಾ "ರಾಜ್ಯದಾದ್ಯಂತ ದುಡಿಯುವ ಜನತೆಯ ಚಳುವಳಿ ಹೋರಾಟಗಳು-ಬೆಳೆದು ಬರುತ್ತಿರುವುದರ ಜತೆಯಲ್ಲಿಯೇ ಸರಕಾರಗಳು ಹೊರಡಿಸುತ್ತಿರುವ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ತೀವ್ರವಾಗಿ ಖಂಡಿಸಿದರು. ರಾಜ್ಯದಾದ್ಯಂತ ನಡೆಯುತ್ತಿರುವ ಪೋಲೀಸು ದೌರ್ಜನ್ಯಗಳನ್ನು ವಿರೋಧಿಸಿದರು. ಕುದುರೆಮುಖ, ಹರಿಹರದಲ್ಲಿ ಮತ್ತು ಅನೇಕ ಕಡೆಗಳಲ್ಲಿ ಪೋಲೀಸರನ್ನು ತಂದು ಕಾರ್ಮಿಕರ ಮೇಲೆ ನಡೆಸಿದ ಧಾಳಿಗಳನ್ನು ವಿವರಿಸಿದರು. ಕಾರ್ಮಿಕ ಚಳುವಳಿಯಲ್ಲಿ ಹಸ್ತಕ್ಷೇಪ ನಡೆಸದಿರುವ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ಸರಕಾರಗಳ ಧೋರಣೆಯಿಂದ ಕರ್ನಾಟಕ ರಾಜ್ಯ ಸರಕಾರವು ಪಾಠ ಕಲಿಯಬೇಕಾಗಿದೆ" ಎಂದರು.

ಸಿ.ಐ.ಟಿ.ಯು. ವಿನ ಉಪಾಧ್ಯಕ್ಷರಾದ ಕಾಂ. ಎನ್. ಕೆ. ಉಪಾಧ್ಯಾಯರವರು ಸರ್ಕಾರದ ಬಂಡವಾಳಶಾಹಿ ಪರ ಆರ್ಥಿಕ ಧೋರಣೆಯಿಂದ ಶ್ರೀಮಂತರು ಕುಬೇರರಾಗಿದ್ದಾರೆ. ದುಡಿಯುವ ಜನತೆ ಬೆಲೆ ಏರಿಕೆಯಿಂದ ನಿರ್ಗತಿಕರಾಗಿದ್ದಾರೆಂದರು.

ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಂ. ಪಿ. ರಾಮಚಂದ್ರ ರಾಯರು ರಾಜ್ಯದ ಹಲವಾರು ಕಡೆ ನಡೆಯುತ್ತಿರುವ ರೈತಚಳುವಳಿಗೆ ಬೆಂಬಲ ಸೂಚಿಸಿದರಲ್ಲದೆ ಕಾರ್ಮಿಕರ ಮತ್ತು ಬಡಜನತೆಯ ಹೋರಾಟದ ಜೊತೆ ಕೃಷಿಕರು ತಮ್ಮ ಹೋರಾಟವನ್ನು ನಡೆಸಿದರೆ ಮಾತ್ರ ನ್ಯಾಯ ಪಡೆಯಲು ಸಾಧ್ಯವಿದೆ ಎಂದು ತಿಳಿಸಿದರು.

ಸಭೆಗೆ ಮೊದಲು ತಾಲ್ಲೂಕಿನ ವಿವಿಧ ಭಾಗಗಳಿಂದ ಬಂದ ಕಾರ್ಮಿಕರು ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿ ರಥಬೀದಿಗೆ ಬಂದಿದ್ದರು. ಸಭೆಯ ಆರಂಭದಲ್ಲಿ ಡೇವಿಡ್, ಎ. ಕರ್ಕಡ ಸ್ವಾಗತಿಸಿದ್ದರು. ಕೊನೆಯಲ್ಲಿ ಅಬ್ರಹಾಂ ಕರ್ಕಡ ಧನ್ಯವಾದ ಸಲ್ಲಿಸಿದರು.

●

ಸುಳ್ಯದಲ್ಲಿ ಪ್ರಜಾಸತ್ತಾತ್ಮಕ ಯುವಜನ ಸಂಘದ ಉದ್ಘಾಟನೆ

ತಾ. 26-10-80 ರಂದು ಸುಳ್ಯದಲ್ಲಿ ಪ್ರಜಾಸತ್ತಾತ್ಮಕ ಯುವ ಜನತೆಯ ಸಭೆಯನ್ನು ಕರೆಯಲಾಗಿದ್ದು ಸುಳ್ಯ ತಾಲೂಕಿನ ಹೆಚ್ಚಿನ ಗ್ರಾಮಗಳಿಂದ ಯುವಜನತೆ ಈ ಸಭೆಯಲ್ಲಿ ಭಾಗವಹಿಸಿದ್ದರು. ಮಹಿಳೆಯರೂ ಸಹ ಬಂದು ಭಾಗವಹಿಸಿದ್ದು ಸುಮಾರು 150 ಯುವಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಸಭೆಯ ಅಧ್ಯಕ್ಷ ಸ್ಥಾನವನ್ನು ದೇವಚಳ್ಳ ಗ್ರಾಮದ ಯಂ. ಯಲ್, ಚಂದ್ರಶೇಖರ ಗೌಡರು ವಹಿಸಿದ್ದು ಸುಳ್ಯದ ನ್ಯಾಯವಾದಿ ಕೆ. ಸೂರ್ಯನಾರಾಯಣ ಭಟ್ ಸ್ವಾಗತಿಸಿದರು. ಸಭೆಗೆ ಮುಖ್ಯ ಅತಿಥಿಯಾಗಿ ಮಂಗಳೂರಿನಿಂದ ಕಾಂ. ಬಿ. ಮಾಧವ ಭಾಗವಹಿಸಿದ್ದರು. ಬಿ. ಮಾಧವನವರು ತಮ್ಮ ಭಾಷಣದಲ್ಲಿ ಇಂದಿನ ಸಮಾಜದಲ್ಲಿ ಯುವಜನತೆಯ ಪಾತ್ರ, ದೇಶದ ಪರಿಸ್ಥಿತಿ, ಸ್ವಾತಂತ್ರ್ಯನಂತರ ದೇಶದಲ್ಲಿ ಬಡ ವರ್ಗದ ಜನತೆಗೆ ಆಗುತ್ತಿರುವ ಅನ್ಯಾಯ, ದೇಶದಲ್ಲಿ ನಡೆಯುತ್ತಿರುವ ಕೋಮುಗಲಭೆಗಳ ಬಗ್ಗೆ, ಮೂಢನಂಬಿಕೆಗಳಿಂದ ಯುವಜನತೆಯನ್ನು ತಪ್ಪುದಾರಿಗೆಳೆಯುವ ವ್ಯವಸ್ಥೆಯ ಬಗ್ಗೆ ವಿವರವನ್ನಿತ್ತರು ಮಾತ್ರವಲ್ಲದೆ ಸಮಾಜದಲ್ಲಿ ಯುವಜನತೆಯ ಮುಖ್ಯ ಪಾತ್ರಗಳನ್ನು ವಿವರಿಸಿದರು. ಅಲ್ಲದೆ ಈ ಸಂಘಟನೆಯ ಧ್ಯೇಯ ಧೋರಣೆ ಹಾಗೂ ಘಟನೆಯ ಬಗ್ಗೆ ವಿವರವಿತ್ತರು. ಪಿ. ಕೆ. ಮೂಸ ಇವರು ಸದಸ್ಯತನ ಹಾಗೂ ಇತರ ವಿಚಾರಗಳ ಬಗ್ಗೆ ವಿವರಿಸಿದರು. ಅಲ್ಲದೆ ತಾಲೂಕು ಮಟ್ಟದ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಪದಾಧಿಕಾರಿಗಳಾಗಿ ಪಿ. ಕೆ. ಮೂಸ (ಪುರಸಭಾ ಸದಸ್ಯರು) ರವರನ್ನು ಅಧ್ಯಕ್ಷರಾಗಿ, ಎ. ಜಯರಾಂ ಅವರು ಪ್ರಧಾನ ಕಾರ್ಯದರ್ಶಿಯಾಗುಳ್ಳ 21 ಜನರ ಕಮಿಟಿಯೊಂದನ್ನು ಆಯ್ಕೆಮಾಡಲಾಯಿತು.

●

ಕೋಲಾರ : ಜ್ವಲಿಸುತ್ತಿರುವ ಜ್ವಾಲಾಮುಖಿ

[ಒಂದನೆ ಪುಟದಿಂದ]

ಧೋರಣೆಯನ್ನು ಪ್ರತಿಭಟಿಸಿತು. ಜಿಲ್ಲೆಯಾದ್ಯಂತದಿಂದ ಸಹಸ್ರಾರು ಜನ ಈ ಮತಪ್ರದರ್ಶನದಲ್ಲಿ ಭಾಗವಹಿದ್ದರು. ಪ್ರತಿ ತಾಲ್ಲೂಕು, ಗ್ರಾಮಗಳಲ್ಲಿ ಸಭೆಗಳು ನಡೆದು ಸಂಘಟನೆಯಾಗತೊಡಗಿತು.

ಈಗಾಗಲೇ ಮುಳಬಾಗಿಲು ತಾಲ್ಲೂಕಿನಲ್ಲಿ ಹೋರಾಟ ಪ್ರಾರಂಭವಾಗಿದ್ದು, ಸುಮಾರು 300ಕ್ಕೂ ಹೆಚ್ಚು ಜನ ಬಂಧಿತರಾಗಿದ್ದಾರೆ. ಬಂಧಿತರಲ್ಲಿ ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿ, ರೈತಮುಖಂಡ ಕಾಂ. ಆರ್. ವೆಂಕಟರಾಮಯ್ಯನವರೂ ಸೇರಿದ್ದಾರೆ. ಇತ್ತೀಚೆಗೆ ಬಾಗೇಪಲ್ಲಿಯಲ್ಲಿ ರೈತಪ್ರದರ್ಶನದ ಮೇಲೆ ಗೋಲಿಬಾರುಮಾಡಿ ಎರಡು ಮಂದಿ ನಿರಪರಾಧಿ ಬಾಂಧವರನ್ನು ಬಲಿತೆಗೆದುಕೊಂಡ ಪೋಲೀಸ ಬರ್ಬರತೆಯಿಂದಾಗಿ ಇಡೀ ಜಿಲ್ಲೆ ತಪ್ತವಾಗಿದೆ. ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಹೋರಾಟ ಪ್ರಾರಂಭವಾಗುವ ಲಕ್ಷಣಗಳಿವೆ. ಪಾಶವೀ ಶಕ್ತಿಯಿಂದ ಜನತೆಯ ಹೋರಾಟಗಳನ್ನು ಹತ್ತಿಕ್ಕಲು ಯತ್ನಿಸಿ ಸಫಲವಾದ ಯಾವುದೇ ನಿದರ್ಶನ ಇತಿಹಾಸದಲ್ಲಿಲ್ಲ. ಇದಕ್ಕೆ ರಾಯರ ಸರ್ಕಾರವೂ ಹೊರತಲ್ಲ.

ಕೋಲಾರ ಜಿಲ್ಲೆಯ ರೈತ ಕ್ರಿಯಾ ಸಮಿತಿ ಸರ್ಕಾರಕ್ಕೆ 22 ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿದೆ. ಇವುಗಳಲ್ಲಿ ಪ್ರಮುಖವಾದವುಗಳು :

1. ಕೋಲಾರ ಜಿಲ್ಲೆ ಕ್ಷಾಮ ಪ್ರದೇಶವೆಂದು ಒಪ್ಪಿಕೊಳ್ಳಬೇಕು.

2. ಮಧ್ಯಮ ಮತ್ತು ಸಣ್ಣ ರೈತರಿಗೆ ಸರ್ಕಾರ, ಬ್ಯಾಂಕು ಮತ್ತು ಸಹಕಾರಿ ಸಂಘಗಳ ಸಾಲಗಳನ್ನು ಮನ್ನ ಮಾಡಬೇಕು.

3. ರೈತರು ಬೆಳೆಯುವ ರಾಗಿ ಒಂದು ಕ್ವಿಂಟಾಲಿಗೆ 150 ರೂ., ಬತ್ತಕ್ಕೆ 150 ರೂ., ಕಬ್ಬಿಗೆ 300 ರೂ. ಮತ್ತು ಆಲೂಗೆಡ್ಡೆ, ಈರುಳ್ಳಿ ಇತರೆ ತರಕಾರಿ ಬೆಳೆಗಳಿಗೆ ನ್ಯಾಯವಾದ ಬೆಲೆ ನಿಗದಿಮಾಡಬೇಕು.

4. ರೈತರಿಗೆ ಒದಗಿಸುವ ವಿದ್ಯುತ್ ಶಕ್ತಿಯ ದರವನ್ನು ಯೂನಿಟಿಗೆ 6 ಪೈಸೆಗೆ ಇಳಿಸಬೇಕು.

5. ಭೂಹೀನರಿಗೆ ಸರ್ಕಾರ ಬಂಜರುಭೂಮಿ ಮತ್ತು ಮರಗಳಿಲ್ಲದ ಸಾಗುವಳಿಗೆ ಯೋಗ್ಯವಾದ ಅರಣ್ಯ ಭೂಮಿಯನ್ನು ಮಂಜೂರು ಮಾಡಬೇಕು.

6. ಎಲ್ಲ ವಸತಿ ಹೀನರಿಗೆ ಸೈಟುಗಳನ್ನು ಮೂರು ತಿಂಗಳಲ್ಲಿ ಮಂಜೂರು ಮಾಡಬೇಕು. ಮತ್ತು ಒಂದು ವರ್ಷದಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕು.

7. ಬಾಗೇಪಲ್ಲಿಯಲ್ಲಿ ನಡೆದ ರೈತರ ಶಾಂತಯುತ ಚಳುವಳಿಗಳನ್ನು ಹತ್ತಿಕ್ಕಲು ಪೋಲೀಸಿನವರು ಗೋಲಿಬಾರ್ ಮಾಡಿ ರೈತರಿಬ್ಬರ ಹತ್ಯೆಕ್ಕೆ ಕಾರಣವಾದ ಬಗ್ಗೆ ಸರ್ಕಾರ ನ್ಯಾಯಾಂಗ ವಿಚಾರಣೆ ನಡೆಸಬೇಕು.

8. 55 ವರ್ಷಕ್ಕೆ ಮೇಲ್ಪಟ್ಟಿರುವ ಎಲ್ಲ ಕೃಷಿಕಾರ್ಮಿಕರಿಗೆ ತಿಂಗಳಿಗೆ 60 ರೂ. ಪೆನ್‌ಷನ್ ಕೊಡಬೇಕು.

9. ಜಿಲ್ಲೆಯಲ್ಲಿ ಬಡವರು ಬಗರುಕುಂ ಸಾಗುವಳಿ ಮಾಡಿರುವ ಎಲ್ಲ ರೈತರಿಗೆ ಅವರ ಜಮೀನುಗಳನ್ನು ಮಂಜೂರು ಮಾಡಬೇಕು.

10. ಜಿಲ್ಲೆಯ ಎಲ್ಲ ಹಳ್ಳಿಗಳಲ್ಲಿ ಜನತೆಗೆ ನ್ಯಾಯಬೆಲೆ ಅಂಗಡಿಗಳ ಮೂಲಕ ವಾರಕ್ಕೆ ಒಂದು ಸಾರಿ ಅವರ ಸಂಸಾರಕ್ಕೆ ಸಾಕಾಗುವಷ್ಟು ಆಹಾರ ಧಾನ್ಯಗಳು ಮತ್ತು ಎಣ್ಣೆಯನ್ನು ವಿತರಣೆ ಮಾಡಲು ಕ್ರಮ ತೆಗೆದುಕೊಳ್ಳಬೇಕು.

11. ಎಲ್ಲ ರೈತಕಾರ್ಮಿಕ ಮಕ್ಕಳಿಗೆ ಎಸ್. ಎಸ್. ಎಲ್. ಸಿ ವರೆಗೂ ಉಚಿತ ವಿದ್ಯಾಭ್ಯಾಸ ದೊರಕಿಸಬೇಕು

12. ರಾಜ್ಯದ ಸ್ವಿಪೆಂಡರಿ ಪದವೀಧರರು ಶೇ. 98ರಷ್ಟು ಬಡರೈತ ಕುಟುಂಬಗಳಿಂದ ಬಂದವರಾಗಿದ್ದು, ಸರ್ಕಾರ ಅವರನ್ನು ಕೆಲಸಗಳಲ್ಲಿ ಖಾಯಂಗೊಳಿಸಿ ಉದ್ಯೋಗ ಕೊಡಬೇಕು...ಇತ್ಯಾದಿ.

ಕೋಲಾರ ಜಿಲ್ಲೆಯ ರೈತರ ಹೋರಾಟಕ್ಕೆ ಕರ್ನಾಟಕ ಪ್ರಾಂತ ರೈತಸಂಘ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆಯಲ್ಲದೆ ತುರ್ತುಕ್ರಮಗಳಿಗೆ ಸರಕಾರವನ್ನು ಒತ್ತಾಯಿಸಿದೆ.

○

ಸಂಪಾದಕೀಯ

[ಒಂದನೇ ಪುಟದಿಂದ]

ಗಾಂಧಿ ಮತ್ತವರ ಬೆಂಬಲಿಗರಿಂದ ನಡೆದಿದೆ. ಅಧ್ಯಕ್ಷೀಯ ಅಧಿಕಾರದ ಪದ್ಧತಿ, ಅಂದರೆ ಅಧ್ಯಕ್ಷರಲ್ಲಿ ಹೆಚ್ಚಿನ ಅಧಿಕಾರಗಳು ಕೇಂದ್ರೀಕೃತವಾಗಿರುವುದು ಮತ್ತು ಅಧ್ಯಕ್ಷರನ್ನು ನೇರವಾಗಿ ಜನ ಚುನಾಯಿಸುವುದು-ಇದರ ಮೂಲಕ ಆಸೆ ಈಡೇರಿಸುವ ಪ್ರಯತ್ನಗಳು ಈಗ ನಡೆಯುತ್ತಲಿವೆ. ವ್ಯಕ್ತಿನಿಷ್ಟ ರಾಜಕೀಯವನ್ನು ಈರೀತಿಯಿಂದ ಉಪಯೋಗಿಸಿಕೊಂಡು ತಾನೆ ಅಧ್ಯಕ್ಷ ಆಗುವ ಆಸೆ ಇಂದಿರಾಗೆ! ದೆಹಲಿಯ ಸಮಾವೇಶದಲ್ಲಿ ಇದನ್ನೇ ಚರ್ಚಿಸಿರುವುದು. ಮೊದಲೇ ಎಲ್ಲವನ್ನು ತಯಾರುಮಾಡಿ ಬಂದವರೆಲ್ಲರ ಒಮ್ಮತ, ಬೆಂಬಲ ಪಡೆಯಲೂ ಪ್ರಯತ್ನ ನಡೆಯಿತು. ಆದರೆ ಇದಕ್ಕೆ ಯಶಸ್ಸು ದೊರೆತಿಲ್ಲ. ಇವೆಲ್ಲವನ್ನೂ ಬಯಲಿಗೆಳೆಯುವುದರೊಂದಿಗೆ, ರಾಜ್ಯದಲ್ಲೂ ಪ್ರಗತಿಶೀಲ ನ್ಯಾಯವಾದಿಗಳು ಮತ್ತು ಪ್ರಜಾಪ್ರಭುತ್ವವಾದಿಗಳು ಮುಂದೆ ಬಂದು ಸರ್ವಾಧಿಕಾರದತ್ತ ನಡೆಯುವ ಪ್ರಯತ್ನಗಳನ್ನು ವಿರೋಧಿಸಬೇಕು. ●

ಹೋಟೆಲ್ ಸಂಘದ ಸರ್ವಸದಸ್ಯರ ಸಭೆ

ದಿನಾಂಕ 16-10-1980 ರಂದು ಬೆಂಗಳೂರಿನ "ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ "ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘ" ದ ಸರ್ವಸದಸ್ಯರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ವಿ ಜೆ.ಕೆ. ನಾಯರ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರೂ, ಪಾರ್ಲಿಮೆಂಟ ಸದಸ್ಯರೂ ಆದ ಕಾಂ. ಇಂಬಿಚ್ಚಿ ಬಾವಾ ಆಗಮಿಸಿದ್ದರು.

ಸಭೆಗೆ ಸ್ವಾಗತ ಕೋರಿದ ಸಂಘದ ಅಧ್ಯಕ್ಷ ಕಾಂ. ಟಿ ಎಸ್. ಅನಂತರಾಂ ಮಾತನಾಡುತ್ತಾ ಹೋಟೆಲ್ ಕಾರ್ಮಿಕರ ಸಂಘ ಅಸ್ತಿತ್ವದಲ್ಲಿ ಬಂದನಂತರ ಬೆಳವಣಿಗೆಯನ್ನು ವಿವರಿಸಿದರು. ಕಾಂ. ವಿ ಜೆ ಕೆ ನಾಯರ್ ಮಾತನಾಡುತ್ತಾ ಅಪಾರ ಪರಿಶ್ರಮದಿಂದ ಸಂಘಟಿಸಿದ ಸಂಘವನ್ನು ಬಲಿಷ್ಟಪಡಿಸಲು ಕೋರಿದರು.

ಕಾಂ. ಇಂಬಿಚ್ಚಿಬಾವಾ ಮಾತನಾಡುತ್ತಾ, "ಕೆಲಸಗಾರರ ಶೋಷಣೆ ಕಡಿಮೆಯಾಗಲು, ಮನುಷ್ಯರಂತೆ ಬದುಕಬೇಕಾದರೆ ಬಂಡವಾಳಶಾಹಿಯ ವಿರುದ್ಧ ಸತತ ಹೋರಾಟ ಮಾಡಬೇಕು ಎಂದರು. ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ಕಾಂ ಇಂಬಿಚ್ಚಿಬಾವಾ ವಿವರಿಸುತ್ತಾ "ಸಾವಿರಾರು ಜನರನ್ನು ಅವಮಾನಮವಾಗಿ ಕೊಲೆಗೈಯ್ದು, ಜನರ ಹೋರಾಟಗಳನ್ನು ನಿರ್ಧಯತೆಯಿಂದ ಸದೆಬಡೆದ ಸರ್ವಾಧಿಕಾರಿಶಕ್ತಿ ಬಲಿಷ್ಟವಾಗುತ್ತಿದೆ. ರೈತಕಾರ್ಮಿಕರು ಬಲಿಷ್ಟರಾಗಿ ಸಂಘಟಿತರಾಗಿ ಈ ದುಷ್ಟಶಕ್ತಿಗಳನ್ನು ನಿರ್ನಾಮಗೈಯಬೇಕೆಂದು" ಕೇಳಿಕೊಂಡರು.

●

ತಿದ್ದುಪಡಿ

ದಿನಾಂಕ 5-10-80ರ ಪತ್ರಿಕೆಯಲ್ಲಿ ಬೆಳಗಾವಿಯ ಇಂಡಿಯನ್ ಅಲ್ಯುಮಿನಿಯಂ ಕಂಪೆನಿಯ ಆಡಳಿತ ವರ್ಗ ಮತ್ತು ಯೂನಿಯನ್ ನಡುವೆ ಆದ ಒಪ್ಪಂದದ ಬಗ್ಗೆ ಸುದ್ದಿ ಪ್ರಕಟವಾಗಿತ್ತು. ಅದರಲ್ಲಿ ವಜಾ ಆದ ಕಾರ್ಮಿಕರಿಗೆ ಟ್ರಿಬ್ಯೂನಲ್ ತೀರ್ಮಾನ ಆಗುವವರೆಗೆ ಶೇ. 60ರಷ್ಟು ಸಂಬಳ ಕೊಡಲು ಒಪ್ಪಿರುವುದಾಗಿ ನಮೂದಾಗಿತ್ತು. ಒಪ್ಪಂದದ ಪ್ರಕಾರ ಶೇ. 60ರಷ್ಟು ಸಂಬಳ ಕೊಡಲು ಒಪ್ಪಿರುವುದು, ಕೇವಲ ಟ್ರಿಬ್ಯೂನಲ್ ತೀರ್ಮಾನ ಆಗುವವರೆಗೆ ಮಾತ್ರ ಅಲ್ಲ. ಹೈಕೋರ್ಟು ಅಥವಾ ಸುಪ್ರೀಂ ಕೋರ್ಟು ತೀರ್ಮಾನ ಆಗುವವರೆಗೆ ಎಂದು ಗಮನಿಸಬೇಕಾಗಿ ವಿನಂತಿ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT